

# ಬೃಂದಾವನ ವಾಣಿ

ಸಂಚಿಕೆ ೨೩ ಆಗಸ್ಟ್ ೨೦೧೯ ಬೃಂದಾವನ ಕನ್ನಡ ಕೂಟ, ನ್ಯೂಜೆರ್ಸಿಯ ದ್ವೈಮಾಸಿಕ

## ಬೃಂದಾವನ ವಾಣಿಯ ಸ್ವಾತಂತ್ರ್ಯೋತ್ಸವ

## ವಿಶೇಷ ಸಂಚಿಕೆ

# ಈ ಸಂಚಿಕೆಯಲ್ಲಿ


೦೪ ಸಂಪಾದಕೀಯ

೦೬ ಅಧ್ಯಕ್ಷರ ನುಡಿ

೦೯ 370 / 35 ವಿಧಿಗಳಿನ್ನಿಲ್ಲ



೧೦ ಭಾರತ ದಿನ ಮೆರವಣಿಗೆ



೨೨ ಪ್ರವಾಸ– ಅಲಾಸ್ಕಾ

೧೨ *ಅಂತರಂಗದ ಅನ್ವೇಷಣೆ*



೧೪ *ಮಳೆ ಬಂತು ಮಳೆ*

೧೮ ಬೃಂದಾವನ ವನ ವಿಹಾರ

೨೯ ಕವನ- ರಾಜಕೀಯ!!!



೨೦ ಕಥೆ – ಹೀಗೆ ಬದುಕಲು ಕಲಿಯೋಣವೇ?

# ಈ ಸಂಚಿಕೆಯಲ್ಲಿ




೩೧ ಶ್ರೀ ವ್ಯಾಸರಾಜರ ಬೃಂದಾವನ

೩೫ ಬೇಸಿಗೆ ರಜಾ ಸವಿನೆನಪು






೪೦ ಚಿಣ್ಣರ ಚಿತ್ರಗಳು





೩೪ ಮಾವಿನ ಸಿಹಿ ಅಡುಗೆಗಳು

೩೭ ನಂದನ್ ಶಾಸ್ತ್ರಿ ಗಾಯನ


೪೧ ರಂಗೋಲಿ

# ಸಂಪಾದಕೀಯ

ಬೃಂದಾವನ ಕನ್ನಡ ಬಾಂಧವರೇ,

ನಮ್ಮಲ್ಲಿ ದಾಪುಗಾಲು ಹಾಕಿಕೊಂಡು ಬಂದ ಬೇಸಿಗೆ ಕಾಲ, ಆಗೊಮ್ಮೆ ಈಗೊಮ್ಮೆ ಮುನಿಸಿಕೊಂಡ ಮಳೆರಾಯನ ಸಹವಾಸದಿಂದ ಸ್ವಲ್ಪ ತಣ್ಣಗಾಗಿದ್ದಂತೂ ನಿಜ. ಇಲ್ಲಿ ಬೇಸಿಗೆ ಕಾಲ ಮುಗಿಯುವುದಕ್ಕೆ ಇನ್ನೂ ನಾಲ್ಕು ವಾರಗಳಿದ್ದರೂ ಸಹ, ಆಗಸ್ಟ್ ಮುಗಿಯುತ್ತಾ ಬರುತ್ತಿದ್ದಂತೆ ನಮಗೆಲ್ಲ ಬೇಸಿಗೆ ಇಷ್ಟು ಬೇಗನೇ ಮುಗಿದೇ ಹೋಯಿತಲ್ಲ ಎಂಬ ತಳಮಳವಾಗುವುದು ಸಹಜ. ಈ ರೀತಿ ಪ್ರತಿಯೊಂದು ಋತುಮಾನಕ್ಕೂ ಅದಕ್ಕೆ ತಕ್ಕ ಪ್ರಾಶಸ್ತ್ಯ ಹಾಗೂ ಮಹತ್ವವನ್ನು ನೀಡಿ ನಮ್ಮನ್ನೆಲ್ಲ ಎಂಥ ಕಾಲಕ್ಕೂ ಒಗ್ಗುವ ಮತ್ತು ಬಗ್ಗುವ ಹಾಗೆ ಮಾಡಿರುವುದರಿಂದಲೇ ಇರಬೇಕು, ನಮ್ಮ ನ್ಯೂ ಜೆರ್ಸಿಯಲ್ಲಿ ಜನಸಂಖ್ಯೆ ಹೆಚ್ಚಾಗಿರುವುದು!


ಕಳೆದ ತಿಂಗಳು ನಮ್ಮ ಬೃಂದಾವನದ ವನವಿಹಾರದಲ್ಲಿ ಭಾಗವಹಿಸಿದ ನಿಮಗೆಲ್ಲರಿಗೂ ಧನ್ಯವಾದಗಳು. ಎಲ್ಲಾ ಆಟೋಟಗಳು ಮುಗಿದ ನಂತರ ನಮ್ಮ ಯುವಕ-ಯುವತಿಯರು ನಡೆಸಿಕೊಟ್ಟ ಗ್ರೂಪ್ ಡ್ಯಾನ್ಸ್ ಬಹಳ ಚೆನ್ನಾಗಿ ಮೂಡಿಬಂತು. ಚಿಕ್ಕ ಮಕ್ಕಳಿಂದ ಹಿಡಿದು ಹಿರಿಯ ನಾಗರೀಕರವರೆಗೆ ಎಲ್ಲರನ್ನೂ ಸೇರಿಸಿಕೊಂಡು ದಿನವಿಡೀ ಹೊರಾಂಗಣ ಲೋಕದಲ್ಲಿ ಕಳೆದ ಕ್ಷಣಗಳು ನಮಗೆಲ್ಲ ನಿಜಕ್ಕೂ ಅವಿಸ್ಮರಣೀಯವಾದುದು.

ಮಳೆಯೇ ಇಲ್ಲವೆಂದುಕೊಂಡು, "ಎಲ್ಲಿ ಹೋಗುವಿರಿ, ನಿಲ್ಲಿ ಮೋಡಗಳೇ ನಾಲ್ಕು ಹನಿಯ ಚೆಲ್ಲಿ" ಎಂದು ಆರ್ತರಾಗಿ ಕರೆದುದ್ದರಿಂದಲೋ ಏನೋ ಮೋಡಗಳು ಒಗ್ಗೊಟ್ಟು ಬಂದು "ಪ್ರದರ್ಶನ" ನೀಡಿ, ಕರ್ನಾಟಕದ ಉದ್ದಗಲಕ್ಕೂ ಈಗ ಅತಿವೃಷ್ಟಿಯ ಪ್ರಕೋಪ ಹೆಚ್ಚಾಗಿದೆ. ಜನಸಾಮಾನ್ಯರ ಜೀವನ ಚಿಂತಾಜನಕವಾಗಿದ್ದು, ಲಕ್ಷಾಂತರ ಜನರು ತಮ್ಮ ಮನೆ-ಮಠಗಳನ್ನು ಕಳೆದುಕೊಂಡು ನಿರಾಶ್ರಿತರಾಗಿದ್ದಾರೆ. ಕೇವಲ ಸರ್ಕಾರ ಅಥವಾ ಒಂದೆರಡು ಕಂಪನಿಗಳು ಸಹಾಯ ಮಾಡಿ ಸರಿಮಾಡುವ ವಿಷಯ ಇದಲ್ಲ, ಇದಕ್ಕೋಸ್ಕರ ಪ್ರತಿಯೊಬ್ಬರೂ ಟೊಂಕ ಕಟ್ಟಿ ನಿಂತು ತಮ್ಮ ಕೈಲಾದ ಅಳಿಲು ಸೇವೆಯನ್ನು ಮಾಡುತ್ತಾ ಬಂದರೆ, ಇನ್ನೊಂದೈದು ವರ್ಷಗಳಲ್ಲಿ ಜನಜೀವನ ಸಹಜ ಸ್ಥಿತಿಗೆ ಮರಳಬಹುದು ಎಂಬುವಷ್ಟರ ಮಟ್ಟಿಗೆ ಹದಗೆಟ್ಟಿದೆ.

ರಾಷ್ಟ್ರೀಯ ಮತ್ತು ರಾಜ್ಯ ಮಟ್ಟದಲ್ಲಿ ನಡೆಯುತ್ತಿರುವ ಅನೇಕ ಮಹತ್ತರ ಬೆಳವಣಿಗೆಗಳ ನಡುವೆಯೂ ಕರ್ನಾಟಕದ ವರ್ತಮಾನದ ಸ್ಥಿತಿ ಚಿಂತಾಜನಕವಾಗಿದೆ. ಮೊದಲೇ ದುಸ್ಥಿತಿಯಲ್ಲಿದ್ದ ಇನ್‌ಫ್ರಾಸ್ಟ್ರಕ್ಚರುಗಳಿಗೆ ಈಗ ಪಾರ್ಶ್ವವಾಯು ಬಡಿದಂತಾಗಿದ್ದು, ರೈತಾಪಿ ಜನರಿಂದ ಹಿಡಿದು, ವರ್ತಕರ ವರೆಗೆ, ವಿದ್ಯಾರ್ಥಿಗಳಿಂದ ಹಿಡಿದು, ಆಫೀಸರುಗಳವರೆಗೆ ಎಲ್ಲರೂ ನಷ್ಟದಲ್ಲಿರುವ ಸ್ಥಿತಿ ನಿರ್ಮಾಣವಾಗಿದೆ. ಸಮ್ಮಿಶ್ರ ಸರ್ಕಾರ ತನ್ನ ಬಿಗುವನ್ನು ಕಳೆದುಕೊಂಡು ತಾನು ತೋಡಿದ ಗುಂಡಿಯಲ್ಲಿ ತಾನೇ ಬಿದ್ದುಕೊಂಡಿತು. ಅದಕ್ಕೆ ಉತ್ತರವಾಗಿ ನಿರ್ಮಾಣಗೊಂಡ ಹೊಸ ಸರ್ಕಾರ ನಾಲ್ಕುವಾರಗಳಾದರೂ ಇನ್ನೂ ಪೂರ್ತಿ ಅಸ್ತಿತ್ವಕ್ಕೆ ಬಂದಿಲ್ಲದಿರುವುದು ಈ ಕಷ್ಟದ ಸಮಯದಲ್ಲಿ ಬಹಳ ಗೊಂದಲವನ್ನು ಸೃಷ್ಟಿಸುತ್ತಿದೆ. ಅಸ್ಥಿರತೆಯಿಂದ ಸ್ಥಿರತೆಯತ್ತ ವಾಲುವ ಎಲ್ಲರ ಮನಸ್ಥಿತಿಗೆ ಈ ವರುಣನ ಅವಕೃಪೆ ನುಂಗಲಾರದ ತುತ್ತಾಗಿ ಪರಿಣಮಿಸಿ, ಅಭಿವೃದ್ಧಿ ಎನ್ನುವುದು ಮರೀಚಿಕೆಯಾಗಿದೆ.

ಈ ಸಂಚಿಕೆಯ ವಿಶೇಷ: ಈ ಸ್ವಾತ್ರಂತ್ರ್ಯ ದಿನಾಚರಣೆಯ ವಿಶೇಷ ಸಂಚಿಕೆಯಲ್ಲಿ ಆಷಾಡ/ಶ್ರಾವಣ ಮಾಸದ ವಿಶೇಷತೆಯನ್ನು ಕುರಿತು ಬರಹಗಳಿವೆ. ಜೊತೆಗೆ ವೈಚಾರಿಕ ಲೇಖನಗಳು, ಪ್ರಬಂಧ-ಪದ್ಯಗಳು ಹಾಗೂ ಮಕ್ಕಳ ಲೇಖನವನ್ನೂ ಪ್ರಕಟಿಸುತ್ತಿದ್ದೇವೆ. ನಿಮ್ಮ ಅಭಿಪ್ರಾಯಗಳನ್ನು ಎಂದಿನಂತೆ ನಮ್ಮೊಡನೆ ಹಂಚಿಕೊಳ್ಳಿ.

ನಮ್ಮ ಮುಂದಿನ ಕಾರ್ಯಕ್ರಮ: ಗಣೇಶ ಪೂಜೆ, ಸೆಪ್ಟೆಂಬರ್ ೧೫ರ ಭಾನುವಾರ ಹೈಟ್ಸ್‌ಟೌನ್ ಹೈಸ್ಕೂಲಿನಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ತಾವೆಲ್ಲರೂ ತಪ್ಪದೇ ಭಾಗವಹಿಸಬೇಕಾಗಿ ವಿನಂತಿ... ಮತ್ತೆ ಸಿಗೋಣ.



ಪ್ರಧಾನ ಸಂಪಾದಕ


**ಸಂಪಾದಕ ಮಂಡಳಿ:**

ದಾಶರಥಿ ಘಟ್ಟು, ಅಜೇಯ ರಾವ್, ಲಕ್ಷ್ಮಿ ಕೋಲಾಲ, ಶ್ರೀವಿದ್ಯಾ ಪ್ರಶಾಂತ್, ರಘುರಾಂ ರಾಯಸಂ, ಮಮತಾ ನಾಗೇಂದ್ರ, ಶ್ರೀವತ್ಸ ಕುಲಕರ್ಣಿ




**ಪ್ರಕಾಶಕರು:**

ಬೃಂದಾವನ ಕನ್ನಡ ಸಂಘ

501(3)(c) ಪಡೆದ ಚಾರಿಟಿ ಸಂಸ್ಥೆ

Karnataka Cultural Organization (KCO) Brindavana
New Jersy, USA

www.Brindavana.org

© 2019. All right reserved. No part of this newsletter may be reproduced, photocopied, or reused without prior permission from the publisher.

ಎಲ್ಲಾ ಮಾಹಿತಿಗಳ ಹಕ್ಕು ಆಯಾ ಲೇಖಕರಿಗೆ ಸೇರಿದ್ದು. "ಬೃಂದಾವನ ವಾಣಿ"ಯಲ್ಲಿ ಪ್ರಕಟವಾಗುವ ಲೇಖನ, ಕಥೆ, ಕವನ, ವಿಚಾರಗಳು ಹಾಗೂ ಮಾಹಿತಿಗಳೆಲ್ಲವುಗಳಿಗೆ ಅವುಗಳ ಲೇಖಕರೇ ಜವಾಬ್ದಾರರು. ಅಂಕಣದಲ್ಲಿ ನೀಡಿರುವ ಮಾಹಿತಿಯ ನಿಖರತೆ ಮತ್ತು ಖಚಿತತೆಗೆ "ಬೃಂದಾವನ ವಾಣಿ" ಮತ್ತು ಬೃಂದಾವನ ಕನ್ನಡ ಕೂಟ ಜವಾಬ್ದಾರರಲ್ಲ.

ಲೇಖನಗಳನ್ನು ಕಳುಹಿಸಲು ಮತ್ತು ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: vani@brindavana.org

**ಸದಸ್ಯತ್ವ ಮಾಹಿತಿ:**

ಬೃಂದಾವನ ಕನ್ನಡ ಸಂಸ್ಥೆ, ನ್ಯೂ ಜೆರ್ಸಿಯಲ್ಲಿ ಕನ್ನಡ ಮತ್ತು ಕನ್ನಡಿಗರ ಪರವಾದ ಚಟುವಟಿಕೆಗಳಲ್ಲಿ ತೊಡಗಿಕೊಂಡಿರುವ ಚಾರಿಟೆಬಲ್ ಸಂಸ್ಥೆ. ನ್ಯೂ ಜೆರ್ಸಿ ಹಾಗೂ ಸುತ್ತಮುತ್ತಲಿನ ಕನ್ನಡ ಬಾಂಧವರೆಲ್ಲ ನಮ್ಮೊಡನೆ ಕೈ ಜೋಡಿಸಿ ಕನ್ನಡತನವನ್ನು ಬೆಳೆಸಿ, ಪೋಷಿಸುವಂತೆ ಈ ಮೂಲಕ ಕೇಳಿಕೊಳ್ಳುತ್ತಿದ್ದೇವೆ. ನೀವು ಈಗಾಗಲೇ ಸದಸ್ಯರಾಗಿ ನೋಂದಾಯಿತರಾಗಿರದಿದ್ದಲ್ಲಿ ದಯವಿಟ್ಟು ಸದಸ್ಯರಾಗುವಂತೆ ಈ ಮೂಲಕ ಕೋರುತ್ತಿದ್ದೇವೆ. ವಾರ್ಷಿಕ, ದ್ವೈವಾರ್ಷಿಕ, ಅಜೀವ ಮತ್ತು ವಿದ್ಯಾರ್ಥಿ ಸದಸ್ಯತ್ವಗಳು ಲಭ್ಯ.

www.brindavana.org ಅನ್ನ್ ವಿಸಿಟ್ ಮಾಡಿ, ನಿಮ್ಮ ವಿವರಗಳನ್ನು ನೀಡಿ ಸದಸ್ಯತ್ವವನ್ನು ಪಡೆಯಿರಿ. ನಿಮ್ಮ ದೇಣಿಗೆ ಟ್ಯಾಕ್ಸ್ ರಹಿತ.

ಹೆಚ್ಚಿನ ಮಾಹಿತಿಗೆ ಸಂಪರ್ಕಿಸಿ: info@brindavana.org

# ಅಧ್ಯಕ್ಷರ ನುಡಿ



ನಾವೆಲ್ಲ ಭಾರತದ ಸ್ವಾತಂತ್ರ್ಯ ದಿನಾಚರಣೆಯನ್ನು ಆಚರಿಸುತ್ತಿರುವಂತೆ ನಮ್ಮೆಲ್ಲರ ಮನದಾಳದಲ್ಲಿ ಇನ್ನೊಂದೆರಡು ವಾರಗಳಲ್ಲಿ ಈ ಬೇಸಿಗೆ ಮುಗಿದೇ ಹೋಯಿತಲ್ಲ ಎನ್ನುವ ಭಾವನೆಯೂ ಬಂದು ಹೋಗಬಹುದು.  ಇನ್ನೆರಡು ವಾರಗಳಲ್ಲಿ ಲೇಬರ್ ಡೇ ಮುಗಿಯುತ್ತಿದ್ದಂತೆ ಶಾಲೆಗಳು ಆರಂಭವಾಗುತ್ತವೆ.  ಒಮ್ಮೆ ಶಾಲೆಗಳು ಶುರುವಾದುವೆಂದರೆ ಮತ್ತೆ ಒಳ್ಳೆಯ ಬೇಸಿಗೆಯ ವಾತಾವರಣ ಬಂದರೂ ಸಹ, ದೂರದ ಡ್ರೈವ್ ಮಾಡಿಕೊಂಡು ಬೀಚ್‌ಗಳಿಗೆ ಹೋಗುವ ವ್ಯವಧಾನ ಕಡಿಮೆಯಾಗುತ್ತದೆ. ನಮ್ಮ ನ್ಯೂ ಜೆರ್ಸಿಯಲ್ಲಿ ಎಲ್ಲ ಸೀಜನ್ನುಗಳೂ ಸಮಾನ ಅನುಪಾತದಲ್ಲಿದ್ದರೂ ಕೂಡ, ಬೇಸಿಗೆಯ ಕಾಲವು ಹೀಗೆ ಬಂದು ಹಾಗೆ ವೇಗವಾಗಿ ಹೋಗುವ ಕಾಲವಾಗೇ ಮೇಲ್ನೋಟಕ್ಕೆ ಅನುಭವಕ್ಕೆ ಬರುತ್ತದೆ.

ಜುಲೈನಲ್ಲಿ ಪಿಕ್‌ನಿಕ್ ಕಾರ್ಯಕ್ರಮವನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಎಲ್ಲ ವಾಲಂಟಿಯರುಗಳಿಗೆ ಎಷ್ಟು ಧನ್ಯವಾದಗಳನ್ನು ಅರ್ಪಿಸಿದರೂ ಕಡಿಮೆಯೇ.  ತಿಂಗಳುದ್ದಕ್ಕೂ ಸುಡುಬಿಸಿಲಿನಲ್ಲಿ ಕಂಗೆಟ್ಟಿದ್ದ ನಮಗೆ ಜುಲೈ ಎರಡನೇ ವಾರದ ಪಿಕ್‌ನಿಕ್‌ನಲ್ಲಿ, ಬಿಸಿಲಿನ ಝಳದ ಕಾರಣದಿಂದ ಜನರು ಭಾಗವಹಿಸುತ್ತಾರೋ ಇಲ್ಲವೋ ಎಂದು ಹೆದರಿದ್ದ ನಮಗೆ ಹೆಚ್ಚಿನ ಸಂಖ್ಯೆಯಲ್ಲಿ ಬಂದು ಪ್ರೋತ್ಸಾಹ ನೀಡಿದ ಎಲ್ಲ ಸದಸ್ಯರುಗಳಿಗೂ ನಮ್ಮ ವಂದನೆಗಳು.  ತರುವಾಯ ಆಗಸ್ಟ್ ಹತ್ತು ಮತ್ತು ಹನ್ನೊಂದರಂದು ಅಟ್ಲಾಂಟಿಕ್ ಸಿಟಿ ಹಾಗೂ ಎಡಿಸನ್‌ನಲ್ಲಿ ಭಾರತೀಯ ಸ್ವಾತಂತ್ರ್ಯ ದಿನಾಚರಣೆಯಲ್ಲಿ ಅನೇಕರು ಪಾಲ್ಗೊಂಡೆವು.  ಮುಂದೆ ಸೆಪ್ಟೆಂಬರ್ ೧೫ರ ಭಾನುವಾರ ನಾವೆಲ್ಲ ನಮ್ಮ ಗಣೇಶೋತ್ಸವ ಕಾರ್ಯಕ್ರಮದಲ್ಲಿ ಮತ್ತೆ ಸೇರುತ್ತೇವೆ.  ಈ ಗಣೇಶೋತ್ಸವ ಅನಿವಾರ್ಯ ಕಾರಣಗಳಿಂದ ಭಾನುವಾರವೇ ಮಾಡಬೇಕಾಗಿ ಬಂದಿರುವುದಕ್ಕೆ ವಿಷಾದಿಸುತ್ತೇವೆ.  ಆದರೆ, ಮಕ್ಕಳಿಂದ ಸಾಮೂಹಿಕ ಗಣೇಶ ಪೂಜೆಯೊಂದಿಗೆ ಆರಂಭವಾಗುವ ನಮ್ಮ ಕಾರ್ಯಕ್ರಮ, ಹಬ್ಬದ ಮಧ್ಯಾಹ್ನದ ಊಟದ ತರುವಾಯ ನಡೆಯುವ ಆಹ್ವಾನಿತ ಅತಿಥಿ ಕಾರ್ಯಕ್ರಮಗಳು ಆದಷ್ಟು ಬೇಗನೇ ಮುಗಿಯುವಂತೆ ನೋಡಿಕೊಳ್ಳುತ್ತಿದ್ದೇವೆ.  ಇದರಿಂದ ಮರುದಿನ ಶಾಲೆಗೆ ಹೋಗುವ ಮಕ್ಕಳಿಗೆ ಯಾವುದೇ ರೀತಿಯ ತೊಂದರೆಯಾಗದಿರಲಿ ಎಂಬುದು ನಮ್ಮ ಆಶಯ.

ಈ ಬೇಸಿಗೆಯ ಇನ್ನೊಂದು ಮಹತ್ವದ ಅನುಭವವೆಂದರೆ ನಮ್ಮ ಕರ್ನಾಟಕದಲ್ಲಿ ಅತಿವೃಷ್ಟಿಯಿಂದ ಲಕ್ಷಾಂತರ ಕುಟುಂಬಗಳು ಅತಂತ್ರವಾಗಿರುವುದು.  ಈ ನಿಟ್ಟಿನಲ್ಲಿ ನಾವೆಲ್ಲರೂ ಕೈಲಾದ ಸಹಾಯವನ್ನು ಮಾಡುವುದು ನಮ್ಮ ಆದ್ಯ ಕರ್ತವ್ಯ.  ಇದಕ್ಕೋಸ್ಕರ ಬೃಂದಾವನ ಕನ್ನಡ ಕೂಟದಲ್ಲಿ ನಾವು ಫಂಡ್ ರೈಸಿಂಗ್ ಕ್ಯಾಂಪೇನ್ ಮಾಡುತ್ತಿದ್ದೇವೆ.  ಈ ತಿಂಗಳ ಕೊನೆಯವರೆಗೆ ನಡೆಯುವ ಈ ಕ್ಯಾಂಪೇನಿನಲ್ಲಿ ಎಷ್ಟು ಸಾಧ್ಯವೋ ಅಷ್ಟು ಹಣ ಸಂಗ್ರಹಿಸಿ ಕರ್ನಾಟಕದ ಮುಖ್ಯಮಂತ್ರಿಗಳ ಕಲ್ಯಾಣ ನಿಧಿಗೆ ಸಮರ್ಪಣೆ ಮಾಡುವ ಯೋಜನೆ ಇದೆ.  ದಯವಿಟ್ಟು ನೀವೂ ಕೈ ಸೇರಿಸಿ, ಕರ್ನಾಟಕದ ಪುನರ್ ನಿರ್ಮಾಣದಲ್ಲಿ ನೀವೂ ಭಾಗಿಯಾಗಿ.

ಈ ಕಂತಿನ ಬೃಂದಾವನ ವಾಣಿ, ನಮ್ಮ ತಿರಂಗ ಬಾವುಟದ ಬಣ್ಣವನ್ನು ಮೈವೆತ್ತಿಕೊಂಡು ಸ್ವಾತಂತ್ರ್ಯೋತ್ಸವದ ದಿನದಂದೇ ಬಿಡುಗಡೆಯಾಗುತ್ತಿರುವುದು ವಿಶೇಷ.  ಎಂದಿನಂತೆ ಅನೇಕ ವೈಚಾರಿಕ ಲೇಖನಗಳನ್ನು ಒಳಗೊಂಡ ಈ ದ್ವೈ ಮಾಸಿಕವನ್ನು ನಿಮ್ಮೊಡನೆ ಹಂಚಿಕೊಳ್ಳುತ್ತಿದ್ದೇವೆ. ಮುಖಪುಟದಲ್ಲಿ ಕರ್ನಾಟಕದ ಐತಿಹಾಸಿಕ ಸ್ಥಳವೊಂದರ ಚಿತ್ರವನ್ನು ಪ್ರಕಟಿಸಿದ್ದೇವೆ.  ಇದು ಎಲ್ಲಿಯದು ಎಂದು ಊಹಿಸಿ ಜೊತೆಗೆ ನಿಮ್ಮ ಅನಿಸಿಕೆಗಳನ್ನು ತಪ್ಪದೇ ಹಂಚಿಕೊಳ್ಳಿ.

ಸೆಪ್ಟೆಂಬರ್ ೧೫ರಂದು ಹೈಟ್ಸ್‌ಟೌನ್ ಹೈ ಸ್ಕೂಲಿನಲ್ಲಿ ನಡೆಯುವ ಬೃಂದಾವನ ಗಣೇಶ ಹಬ್ಬದ ಕಾರ್ಯಕ್ರಮದಲ್ಲಿ ಭಾಗವಹಿಸಲು ಮರೆಯದಿರಿ... ಮತ್ತೆ ಸಿಗೋಣ.

ತಮ್ಮ ವಿಶ್ವಾಸಿ,

ಸತೀಶ್ ಹೊಸನಗರ

ಅಧ್ಯಕ್ಷರು, ಬೃಂದಾವನ ಕನ್ನಡ ಕೂಟ

ಸೌರಭ ತಂಡದ ಪರವಾಗಿ






# ನೋಂದಾವಣೆ ಮಾಡಿಕೊಳ್ಳಲು ಇಲ್ಲಿ ಕ್ಲಿಕ್ ಮಾಡಿ.

## Early bird ends on August 31.

# ಸ್ವಾತಂತ್ರ್ಯೋತ್ಸವ ಸಂಭ್ರಮ



*ಎಲ್ಲರಿಗೂ ಭಾರತದ ಸ್ವಾತಂತ್ರ್ಯ ದಿನಾಚರಣೆಯ*

*ಹಾರ್ದಿಕ ಶುಭಾಶಯಗಳು!*

# 370/35 ವಿಧಿಗಳಿನ್ನಿಲ್ಲ



*ಅಜೇಯ್ ರಾವ್*

ಮತ್ತೊಮ್ಮೆ ಬಂದಿದೆ ನಮ್ಮ ಭಾರತದ ಸ್ವಾತಂತ್ರ್ಯೋತ್ಸವ ಅದಕ್ಕೆ ಮೆರುಗಾಗಿ ಭಾರತ ಸರ್ಕಾರವು ಸಂವಿಧಾನದ ೩೭೦ ಹಾಗೂ ೩೫ಎ ವಿಧಿಗಳನ್ನು ರದ್ದು ಮಾಡಿದಲ್ಲದೆ, ಜಮ್ಮು ಕಾಶ್ಮೀರ ಮತ್ತು ಲಡಾಖ್ ಗಳನ್ನು ಕೇಂದ್ರಾಡಳಿತ ಪ್ರದೇಶಗಳಾಗಿ ವಿಭಜಿಸಲಾಗಿದೆ.. ೭೦ ವರುಷಗಳ ಹಿಂದಿನ ಕಟ್ಟಳೆ ಕಡಿದು ಬಿದ್ದು, ಹೊಸ ದಾರಿಗೆ ನಾಂದಿಯಾಗಿದೆ. ಹಲವಾರು ಭೌಗೋಳಿಕ ಬೆಳವಣಿಗೆಗಳೂ ಈ ದಿಟ್ಟ ನಿರ್ಧಾರಕ್ಕೆ ಕಾರಣವೆನ್ನಲಾಗಿದೆ.

ಸರಕಾರವು ಕಾರ್ಯಾಂಗ, ರಾಜ್ಯಸಭೆ, ಲೋಕಸಭೆಗಳಲ್ಲಿ ಈ ನಿರ್ಧಾರವನ್ನು ಸುಲಲಿತವಾಗಿ ಅಂಗೀಕರಿಸಿದ್ದಲ್ಲದೆ ಕಾಶ್ಮೀರದ ಪರಿಸ್ತಿತಿ ಕೈ ಮೀರದಂತೆ ನೋಡಿರುವುದು ಶ್ಲಾಘನೀಯ. ಜಮ್ಮು ಹಾಗೂ ಲಡಾಖ್ ಗಳಲ್ಲದೆ ದೇಶದೆಲ್ಲೆಡೆಯೂ ಈ ನಿರ್ಧಾರಕ್ಕೆ ಅತೀವ ಸಂತಸವೂ ವ್ಯಕ್ತವಾಗಿದೆ.

ಪಾಕಿಸ್ತಾನವು ಈ ನಿರ್ಧಾರವು ಅಸಮ್ಮತ ಎಂದು ಕೂಗುತ್ತಿದ್ದಾಗಲೂ ಮುಖ್ಯ ದೇಶಗಳೆಲ್ಲವೂ ಭಾರತದೊಂದಿಗೆ ನಿಂತು ಭಾರತದ ಆಂತರಿಕ ನಿರ್ಧಾರಗಳಲ್ಲಿ ನಾವು ಮೂಗು ತೂರಿಸುವಂತಿಲ್ಲ ಎಂದಿವೆ.

ನಿರ್ಧಾರವು ದಿಟ್ಟ, ಸಕಾಲಿಕ ಹಾಗೂ ನ್ಯಾಯಯುತ, ಆದರೆ ನಿರ್ಧಾರದ ನಿಜವಾದ ಸಫಲತೆ ಇನ್ನು ಮುಂದೆ ಕಾದು ನೋಡಬೇಕು. ಈ ನಿರ್ಧಾರದಿಂದ ನಿಜಕ್ಕೂ ಕಣಿವೆಯಲ್ಲಿ ಶಾಂತಿ ನೆಲೆಸಲಿದೆಯೇ? ಬೆಳವಣಿಗೆ ಆಗಲಿದೆಯೆ? ರಾಜ್ಯದ ರಾಷ್ಟ್ರದ ಸುರಕ್ಷೆ , ಅಲ್ಲಿನ ಬೆಳವಣಿಗೆಗೆ ಸ್ಥಳೀಯರ ಭಾಗ್ವಹಿಸುವಿಕೆ, ಕಾಶ್ಮೀರದೆಡೆಗೆ ಉಳಿದ ಭಾರತೀಯರ ನಡತೆ, ಭೌಗೋಳಿಕ ಅಭಿಪ್ರಾಯಗಳನ್ನು ಸರಿಯಾಗಿ ನಡೆಸುವುದು ಈಗಿನ ಅತ್ಯಂತ ಮುಖ್ಯ ಗುರಿ.

## ಏನಿದು *370/35 A*?

- ೧೯೪೮ರಲ್ಲಿ ಕಾಶ್ಮೀರ ಭಾರತದ ಜತೆ ಸೇರಿದಾಗ, ಕಾಶ್ಮೀರಕ್ಕೆ ನೀಡಿದ ವಿಶೇಷ ತಾತ್ಕಾಲಿಕ ಸೌಲಭ್ಯ
- ೧೯೬೪ರಲ್ಲಿ ಸರ್ವ ಸಮ್ಮತವಾಗಿ ರದ್ದಾಗ ಹೊರಟಿತ್ತು.
- ಈ ವಿಧಿಯಡಿ ಜಮ್ಮು ಕಾಶ್ಮೀರದಲ್ಲಿ ಅಲ್ಪ ಸಂಖ್ಯಾತರಿಗೆ ಮೀಸಲಾತಿ ಇಲ್ಲ,
- ಭಾರತೀಯ ಸಂವಿಧಾನದ ವಿಧಿಗಳು ಸಿಂಧುವಲ್ಲ,
- ಆರ್ ಟಿ ಐ, ಐ ಪಿ ಸಿ ಇನ್ನಿತರ ಕಾಯ್ದೆಗಳು ಕಾಶ್ಮೀರದಲ್ಲಿ ಇರಲಿಲ್ಲ
- ೩೫ಎ ಅಡಿಯಲ್ಲಿ ರಾಜ್ಯ ಪೌರತ್ವ ನಿರ್ಧಾರ
- ಜ ಕಾ ರಾಜ್ಯದಲ್ಲಿ ಬೇರಾರೂ ಜಮೀನು ಕೊಳ್ಳುವಂತಿಲ್ಲ, ಬೆಳವಣಿಗೆ ಕುಂಠಿತ
- ಮಹಿಳೆಯರು ಹೊರರಾಜ್ಯದವರೊಡನೆಮದುವೆ ಆದಲ್ಲಿ ಪೌರತ್ವ ರದ್ದು
- ಭಾರತದ ಉಳಿದ ನಾಗರೀಕರಿಗಿಂತ ಹೆಚ್ಚು ಸವಲತ್ತುಗಳು, ಹಕ್ಕುಗಳು

## ಹೇಗೆ ರದ್ದು ಮಾಡಲಾಯಿತು

- ರಾಜ್ಯದ ಒಪ್ಪುಗೆಯನ್ನು ನೀಡಿದ ರಾಜ್ಯಪಾಲರು
- ಕಾಯ್ದೆ ರದ್ದತಿಗೆ ಆಣತಿ ಕೊಟ್ಟ ರಾಷ್ಟ್ರಪತಿಗಳು
- ರಾಜ್ಯಸಭೆಯಲ್ಲಿ ಎರಡೂ ನಿರ್ಧಾರಗಳಿಗೆ ೧೨೫-೬೧ ಮತಗಳಿಂದ ಅಂಗೀಕಾರ
- ಲೋಕಸಭೆಯಲ್ಲೂ ಸಹ ಎರಡನೆ ಮೂರಕ್ಕೂ ಹೆಚ್ಚು ಬಹುಮತ

## ಸ್ವಾತಂತ್ರ್ಯೋತ್ಸವ ಸಂಭ್ರಮ

# ಭಾರತ ದಿನದ ಮೆರವಣಿಗೆ



*ರಘುರಾಂ ರಾಯಸಮ್*

ಆಗಸ್ಟ್ ಎಂದರೆ ಪ್ರತಿಯೊಬ್ಬ ನಾಗರೀಕನಿಗೆ ನೆನಪಿಗೆ ಬರುವುದು ಸ್ವಂತಂತ್ರ ದಿನೋತ್ಸವದ ಹಬ್ಬ. ನಮ್ಮ ತಾಯ್ನಾಡಿಗೆ ಸ್ವತಂತ್ರಬಂದು ೭೨ ವರ್ಷಗಳು ಮುಗಿದು ಈಗ ೭೩ನೇ ವರ್ಷಕ್ಕೆ ಕಾಲಿಟ್ಟಿದೆ. ಈ ವರ್ಷದ ಈ ಹಬ್ಬ ಇನ್ನು ಹೆಚ್ಚಿನ ಮಹತ್ವ ಪಡೆದಿದೆ. ಯಾಕೆಂದರೆ ಜಮ್ಮು ಮತ್ತು ಕಾಶ್ಮೀರಾ ಈಗ ಪೂರ್ತಿಯಾಗಿ ಭಾರತದ ಒಂದು ಅವಿಭಾಜ್ಯ ಅಂಗವಾಗಿದೆ. ನಮ್ಮ ನ್ಯೂಜೆರ್ಸಿ ಯಲ್ಲಿ ಬೃಂದಾವನ ಕನ್ನಡ ಕೂಟ ಎರಡು ಭಾಗಗಳಲ್ಲಿ ಸ್ವಾತಂತ್ರ್ಯ ದಿನದ ಮೆರವಣಿಗೆಯಲ್ಲಿ ಪಾಲ್ಗೊಂಡಿತು .

೧. ಅಟ್ಲಾಂಟಿಕ್ ಸಿಟಿ
೨. ಓಕ್ ಟ್ರೀ ರೋಡ್

"ಭಾರತ ಮಾತೆಗೆ ಜಯವಾಗಲಿ - ಭಾರತ್ ಮಾತಾ ಕಿ ಜೈ " ಎಂಬ ಹರ್ಷೋದ್ಗಾರ ಮಾಡುತಿದ್ದಾಗ ರೋಮ ರೋಮಗಳಲ್ಲಿನ ಸಂಚಲನದ ಅನುಭವ ಅಕ್ಷರಗಳಲ್ಲಿ ಬಣ್ಣಿಸುವುದು ಅಸಾಧ್ಯ. ನಮ್ಮವರೇ ಆದ ಬೃಂದಾವನ ಸದಸ್ಯರ ನಡುವೆ ಈ ಉತ್ಸವದಲ್ಲಿ ಪಾಲ್ಗೊಳ್ಳುವುದು ಇನ್ನು ಹೆಚ್ಚು ಸಂತೋಷವನ್ನು ನೀಡಿತು.

ಅಟ್ಲಾಂಟಿಕ್ ಸಿಟಿ ಯಲ್ಲಿ, ಬೃಂದಾವನ ತಂಡ ಒಂದು ವಾಹನದಲ್ಲಿ , ಮೈಸೂರು ಮಹಾರಾಜಾ ಹಾಗು ಇನ್ನಿತರ ವೇಷಗಳಲ್ಲಿ ನಮ್ಮ ಸಂಸ್ಕೃತಿಯನ್ನು ಉಳಿದವರಿಗೆ ತೋರಿಸುತ್ತಾ, ಹೆಮ್ಮೆಯಿಂದ ಭಾರತದ ಬಾವುಟವನ್ನು ಬೀಸುತ್ತ ಅತಿ ಉತ್ಸಾಹದಿಂದ ಮೆರವಣಿಗೆಯಲ್ಲಿ ಪಾಲ್ಗೊಂಡೆವು.

ಓಕ್ ಟ್ರೀ ರೋಡ್ ನಲ್ಲಿ ಮೆರವಣಿಗೆ ಅದ್ದೂರಿಯಿಂದ ನಡೆಯಿತು. Dr ರಾಮ್ ಬೆಂಗಳೂರು ಅವರ ಚಿಕಿತ್ಸಾಲಯದ ಎದುರು ಒಂದು ಟೆಂಟ್ ಹಾಕಿ, ಒಂದು ದೊಡ್ಡ ಸ್ಪೀಕರ್ ನಲ್ಲಿ ಕನ್ನಡ ಹಾಡುಗಳನ್ನು ಹಾಕಿ ಅನೇಕ ಬೃಂದಾವನ ಸದಸ್ಯರು ಸಂಭ್ರಮಿಸಿದರು. ಸುಡು ಬಿಸಿಲನ್ನು ಲೆಕ್ಕಿಸದೆ ನೂರಾರು ಜನರು ಪಾಲ್ಗೊಂಡರು. ಆ ಬಿಸಿಲಿಗೆ ದಣಿವು ತೀರಲು ಎಲ್ಲಾ ಬೃಂದಾವನ ಸದಸ್ಯರು ಅಲ್ಲಿ ಉತ್ಸವದಲ್ಲಿ ಪಾಲ್ಗೊಳ್ಳುವ ಎಲ್ಲರಿಗೂ ಉಚಿತವಾಗಿ ನೀರನ್ನು ಹಾಗು ಎಳನೀರನ್ನು ನೀಡಿದರು. ನಮ್ಮ ಭಾರತ ಬಾವುಟವನ್ನು ಹೆಮ್ಮೆಯಿಂದ ಹಿಡಿದು ಘಂಟಾಘೋಷವಾಗಿ ಭಾರತ ಮಾತೆಯ ಜಯಕಾರವನ್ನು ಕೂಗಲಾಯಿತು.

ಈ ಉತ್ಸವದಲ್ಲಿ ಇತ್ತೀಚಿಗೆ ಬಿಡುಗಡೆಯಾದ ಕುರುಕ್ಷೇತ್ರ ಚಿತ್ರದಲ್ಲಿ ಅರ್ಜುನ ಪಾತ್ರಧಾರಿ ಸೋನು ಸೂದ್ ಮುಖ್ಯ ಅತಿಥಿಯಾಗಿದ್ದಿದ್ದು ಒಂದು ವಿಶೇಷ

“ ನಮ್ಮ ಭಾರತ ಬಾವುಟವನ್ನು ಹೆಮ್ಮೆಯಿಂದ ಹಿಡಿದು ಘಂಟಾಘೋಷವಾಗಿ ಭಾರತ ಮಾತೆಯ ಜಯಕಾರವನ್ನು ಕೂಗಲಾಯಿತು. ”

ವಾಗಿತ್ತು. ಇದು ಅಲ್ಲದೆ ನಮ್ಮ ನ್ಯೂಜೆರ್ಸಿ ರಾಜ್ಯದ ಗವರ್ನರ್ ಪಾಲ್ಗೊಂಡಿದ್ದುದು ಇನ್ನೊಂದು ವಿಶೇಷ ವಾಗಿತ್ತು. ಮುಂಬರುವ ವರ್ಷಗಳಲ್ಲಿ ಎಲ್ಲ ಕನ್ನಡಿಗರು ಈ ಉತ್ಸವದಲ್ಲಿ ಇನ್ನು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳುತ್ತಾರೆ ಎಂದು ಆಶಿಸೋಣ


ಬೃಂದಾವನ


ಬೃಂದಾವನ









# ದೇವಿಯ ಸರ್ವವ್ಯಾಪಿತ್ವ, ಸರ್ವಶಕ್ತಿತ್ವ ಹಾಗೂ ಸರ್ವಜ್ಞತ್ವ

*ಅಂತರಂಗದ ಅನ್ವೇಷಣೆ–ಡಾ// ಎಂ ಜಿ ಪ್ರಸಾದ್*



**ಪೀಠಿಕೆ**

ದೇವಿ ಎಂದರೆ ದಿವ್ಯವಾದ ಶಕ್ತಿ. ತಮಸ್ಸೆಂಬ ಅಂಧಕಾರದ ತಾತ್ಕಾಲಿಕ ಶಕ್ತಿಯನ್ನು ನಿರ್ಮೂಲ ಮಾಡುವ ಪ್ರಕಾಶಮಯ ಶಕ್ತಿಯೇ ದೇವಿ. ಈ ಮಹಾಶಕ್ತಿಯ ಹೊರ ರೂಪವು ಸ್ತ್ರೀ ರೂಪವಾಗಿರುವುದರಿಂದ ದೇವಿ ಎಂದು ಸಂಬೋಧಿಸುತ್ತೇವೆ. ದೇವಿಯ ವಿಶ್ವಾತ್ಮಕ ಶಕ್ತಿಯನ್ನು ನಾವು ಸನಾತನ ಧರ್ಮದ ಸಾಹಿತ್ಯದಲ್ಲಿ ಎಲ್ಲೆಡೆ ಕಾಣಬಹುದು. ಈ ಪ್ರಸ್ತುತ ಲೇಖನದಲ್ಲಿ ಹದಿನೆಂಟು ಪುರಾಣಗಳಲ್ಲಿ ಒಂದಾದ ಶ್ರೀ ಮಾರ್ಕಂಡೇಯ ಪುರಾಣದಲ್ಲಿರುವ ದೇವಿ ಮಹಾತ್ಮ್ಯ ಎನ್ನುವ ಭಾಗದಲ್ಲಿರುವ ಸ್ತುತಿಯೊಂದನ್ನು ವಿಚಾರ ಮಾಡಲಾಗಿದೆ. ದೇವಿ ಮಹಾತ್ಮ್ಯೆಯಲ್ಲಿ ೭೦೦ ಮಂತ್ರ ಸಮಾನ ಶ್ಲೋಕಗಳಿರುವುದರಿಂದ ಇದನ್ನು ದುರ್ಗಾ ಸಪ್ತಶತಿ ಎಂದು ಕರೆಯಲಾಗಿದೆ. ದೇವಿ ಚಂಡಿಯನ್ನು ಉದ್ದೇಶಿಸಿ ಮಾಡುವ ಹೋಮದಲ್ಲಿ ದುರ್ಗಾ ಸಪ್ತಶತಿಯ ಪಾರಾಯಣ ಮಾಡುವುದರಿಂದ ಇದನ್ನು ಚಂಡೀಪಾಠ ಎಂದೂ ಕರೆಯಲಾಗಿದೆ. ಇಲ್ಲಿ ದೇವಿಯ ರೂಪವು ಎರಡು ರೀತಿಯಲ್ಲಿ ವರ್ಣಿತವಾಗುತ್ತದೆ. ಒಂದು ಕೋಮಲ ರೂಪ ಮತ್ತು ಇನ್ನೊಂದು ಉಗ್ರ ರೂಪ. ಶ್ರೀ ಲಲಿತೆಯು ದೇವಿಯ ಕೋಮಲ ರೂಪವಾದರೆ, ದುರ್ಗೆ ದೇವಿಯ ಉಗ್ರ ರೂಪ. ಕೋಮಲ ಭಾವವು ಸಾತ್ವಿಕ ಭಕ್ತರಿಗಾದರೆ, ಉಗ್ರ ರೂಪವು ರಾಜಸಿಕ ಹಾಗೂ ಪ್ರಧಾನವಾಗಿ ತಾಮಸಿಕ ಭಕ್ತರಿಗೆ ಶಿಕ್ಷಾ ರೂಪದಲ್ಲಿದೆ. ದುರ್ಗಾ ಸಪ್ತಶತಿಯನ್ನು ವಿಶ್ವಾದ್ಯಂತ ಅನೇಕ ಭಕ್ತ ಮತ್ತು ಭಕ್ತೆಯರು ಪಠಣ ಮಾಡುತ್ತಾರೆ.

**ದುರ್ಗಾ ಸಪ್ತಶತಿ**

ಶ್ರೀಮದ್ಭಗವದ್ಗೀತೆಯಂತೆ ೭೦೦ ಶ್ಲೋಕಗಳಿರುವ ದುರ್ಗಾ ಸಪ್ತಶತಿಯಲ್ಲಿ ಹದಿಮೂರು ಅಧ್ಯಾಯಗಳಿವೆ. ದೇವಿಯ ಅಸಾಮಾನ್ಯ ಶಕ್ತಿಯು, ದೇವಿ ದುರ್ಗಾ ಪರಮೇಶ್ವರಿಯ ಮೂರು ರೂಪಗಳಲ್ಲಿ ವರ್ಣಿತವಾಗಿದೆ. ಎರಡನೆಯ ರೂಪವಾದ ಮಹಾಲಕ್ಷ್ಮಿ ರೂಪದಲ್ಲಿ ಎರಡನೇ, ಮೂರನೇ ಮತ್ತು ನಾಲ್ಕನೇ ಅಧ್ಯಾಯಗಳಲ್ಲಿ ವರ್ಣಿತವಾಗಿದೆ. ನಂತರ ಮೂರನೆಯ ರೂಪವಾದ ಮಹಾಸರಸ್ವತಿ ರೂಪಿನಲ್ಲಿ ಐದನೇ ಅಧ್ಯಾಯದಿಂದ ಹಿಡಿದು ಹದಿಮೂರನೇ ಅಧ್ಯಾಯದವರೆಗೂ ವರ್ಣಿತವಾಗಿದೆ. ಈ ಹದಿಮೂರು ಅಧ್ಯಾಯಗಳಲ್ಲಿ ದೇವಿಯ ಸ್ತುತಿ ಎಂಬ ವಿಶೇಷ ರೂಪದಲ್ಲಿ ನಾಲ್ಕು ಸ್ತುತಿಗಳು ವರ್ಣಿತವಾಗಿವೆ. ಮೊದಲನೆಯದಾಗಿ ಬರುವ ಸ್ತುತಿಯನ್ನು ಸೃಷ್ಟಿಕರ್ತನಾದ ಬ್ರಹ್ಮದೇವನು ಮಹಾಕಾಳಿ ರೂಪಿನ ದೇವಿಗೆ ಅರ್ಪಿಸುತ್ತಾನೆ. ಇದರ ಸಂದರ್ಭ ಹೀಗಿದೆ. ಪರಬ್ರಹ್ಮ ಸ್ವರೂಪನಾದ ಶ್ರೀಮನ್ನಾರಾಯಣನಲ್ಲಿ ಯೋಗನಿದ್ರೆಯ ರೂಪಿನಲ್ಲಿ ದೇವಿ ಅಡಗಿದ್ದಾಳೆ. ಸೃಷ್ಟಿಯ ಆದಿಯಲ್ಲಿ ಬ್ರಹ್ಮದೇವನು ಶ್ರೀಮನ್ನಾರಾಯಣನ ನಾಭಿಯಿಂದ ಹೊರಬಂದ ಕಮಲದಲ್ಲಿ ಆಸೀನನಾಗಿದ್ದಾನೆ. ಆ ಸಮಯದಲ್ಲಿ ಹೊರಬಂದ ಮಧುಕೈಟಭರೆಂಬ ರಾಕ್ಷಸರು ಬ್ರಹ್ಮದೇವನನ್ನು ಕೊಲ್ಲಲು ಯತ್ನಿಸಿದರು. ಆಗ ಬ್ರಹ್ಮದೇವನು ಯೋಗ ನಿದ್ರಾ ರೂಪಿನಲ್ಲಿದ್ದ ದೇವಿಯನ್ನು ಸ್ತುತಿಸಿ ಶ್ರೀಮನ್ನಾರಾಯಣನಲ್ಲಿ ಅಂತರ್ಗತವಾಗಿದ್ದ ದೇವಿಯು ಹೊರಬಂದಾಗ ಶ್ರೀಮನ್ನಾರಾಯಣನಿಗೆ ಎಚ್ಚರವಾಯಿತು. ಆಗ ಶ್ರೀಮನ್ನಾರಾಯಣನು ಮಧುಕೈಟಭರನ್ನು ಕೊಂದನು. ಇಲ್ಲಿ ಮಧುಕೈಟಭರು ರಾಜಸಿಕ ಹಾಗೂ ತಾಮಸಿಕ ಶಕ್ತಿಗಳ ಪ್ರತೀಕ. ಅವರು ಸೃಜನಾತ್ಮಕ ಶಕ್ತಿಯಾದ ಬ್ರಹ್ಮನಿಗೆ ತೊಂದರೆ ಕೊಟ್ಟಾಗ ದೇವಿಯನ್ನು ಸ್ತುತಿ ಮಾಡಿದನು.

ಎರಡನೆಯದಾಗಿ ಬರುವ ದೇವಿಯ ಮಹಾಲಕ್ಷ್ಮೀ ರೂಪವನ್ನು ಇಂದ್ರಾದಿ ದೇವತೆಗಳು ಸ್ತುತಿ ಮಾಡಿದರು. ಇದರ ಸಂದರ್ಭ ಹೀಗಿದೆ. ತೀವ್ರ ತಪಸ್ಸನ್ನಾಚರಿಸಿದ ಅಸುರ ಮಹಿಷಾಸುರನು ವಿಶೇಷ ವರವನ್ನು ಪಡೆದಿದ್ದನು. ಅದೇನೆಂದರೆ ತಾನು ಸ್ತ್ರೀಯಿಂದ ಬಿಟ್ಟು ಇನ್ನ್ಯಾವುದೇ ರೀತಿಯಲ್ಲೂ ಮರಣವನ್ನು ಹೊಂದಬಾರದು ಎಂಬ ವರ. ಬಲಹೀನಳಾದ ಸ್ತ್ರೀ ತನಗೇನು ಮಾಡಬಹುದು ಎಂಬುದೇ ಅವನ ಧೋರಣೆ. ಇದರಿಂದ ಮಹಿಷಾಸುರನು ದೇವತೆಗಳಿಗೆಲ್ಲಾ ಕಿರುಕುಳ ನೀಡಿದಾಗ, ದೇವತೆಗಳು ವಿಷ್ಣು ಹಾಗೂ ಶಿವ ಇವರನ್ನು ಸಹಾಯ ಕೇಳಿದರು. ಆಗ ವಿಷ್ಣು ಹಾಗೂ ಶಿವ ಅವರಿಂದ ಹೊರಬಂದ ಕ್ರೋಧಾಗ್ನಿಯು ದೇವಿ ದುರ್ಗೆಯ ಮಹಾಲಕ್ಷ್ಮೀ ರೂಪದಲ್ಲಿ ಸೇರಿ ಪ್ರಕಟವಾಗಿ ಎಲ್ಲಾ ದೇವತೆಗಳೂ ಅವರವರ ಶಸ್ತ್ರಗಳನ್ನು ದೇವಿಗೆ ನೀಡಿದರು. ಅಪ್ರತಿಮ ಶಕ್ತಿಯಿಂದ ದೇವಿಯು ಮಹಿಷಾಸುರನನ್ನು ಕೊಂದಳು. ಆಗ ಇಂದ್ರಾದಿ ದೇವತೆಗಳು ದೇವಿಯ ಸ್ತುತಿಯನ್ನು ಮಾಡಿದರು.

ಮೂರನೆಯದಾಗಿ ಬರುವ ಮಹಾ ಸರಸ್ವತಿ ರೂಪದಲ್ಲಿ ದೇವಿಯನ್ನು ಮತ್ತೆ ಇಂದ್ರಾದಿ ದೇವತೆಗಳು ಎರಡು ಸಂದರ್ಭಗಳಲ್ಲಿ ಸ್ತುತಿಸುತ್ತಾರೆ. ಆ ಸಂದರ್ಭ ಹೀಗಿದೆ. ಶುಂಭ ಮತ್ತು ನಿಶುಂಭ ಎಂಬ ಅಸುರರು ತೀವ್ರ ಸಾಧನೆಯಿಂದ ಶಕ್ತಿ ಸಂಪಾದಿಸಿ ದೇವತೆಗಳ ಮೇಲೆ ಧಾಳಿ ನಡೆಸಿದರು. ಹತಾಶರಾದ ಇಂದ್ರಾದಿ ದೇವತೆಗಳಿಗೆ ದೇವಿಯು ನೀಡಿದ್ದ ಅಭಯವು ನೆನಪಿಗೆ ಬಂದಿತು. ಆಗ ಎಲ್ಲರೂ ಏಕಮನಸ್ಸಿನ ಭಕ್ತಿಯಿಂದ ದೇವಿಯ ಸರ್ವವ್ಯಾಪಿತ್ವ, ಸರ್ವಶಕ್ತಿತ್ವ ಹಾಗೂ ಸರ್ವಜ್ಞತ್ವಗಳನ್ನು ಸ್ತುತಿಸಿದರು. ಈ ಸ್ತುತಿಯನ್ನೇ ಅಪರಾಜಿತಾ ಸ್ತೋತ್ರ ಎನ್ನುವುದು. ಇಂದ್ರಾದಿ ದೇವತೆಗಳ ಸ್ತುತಿಗೆ ಪ್ರಸನ್ನಗೊಂಡು ದೇವಿಯು ಒಂದು ಸುಂದರ ಸ್ತ್ರೀ ರೂಪದಲ್ಲಿ ಅವತರಿಸಿದಳು. ಶುಂಭನು ಆ ಅಪೂರ್ವ ಸುಂದರಿಯು ತನ್ನನ್ನು ವಿವಾಹ ಮಾಡಿಕೊಳ್ಳಬೇಕೆಂಬ ಆದೇಶವನ್ನು ಕಳುಹಿಸಿದನು. ಆಗ ಆ ಸುಂದರಿಯು ಶುಂಭ-ನಿಶುಂಭರು ಯುದ್ಧದಲ್ಲಿ ತನ್ನನ್ನು

ಗೆಲ್ಲಬೇಕೆಂದು ಹೇಳಿದಳು. ಅದಕ್ಕೆ ಶುಂಭ-ನಿಶುಂಭರು ಆ ಸುಂದರಿಯನ್ನು ಅತಿ ಸುಲಭದಲ್ಲಿ ಗೆಲ್ಲಬಹುದೆಂಬ ಧಿಕ್ಕಾರ ಭಾವದಿಂದ ಒಪ್ಪಿಕೊಂಡರು. ಯುದ್ಧ ಘೋರವಾಗಿ ನಡೆದು ದೇವಿ ಅಪರಾಜಿತೆಯು ತನ್ನ ಅನೇಕ ರೂಪಗಳಾದ ಬ್ರಾಹ್ಮೀ, ಕೌಮಾರೀ, ನಾರಾಯಣಿ ಶಕ್ತಿಗಳೊಡನೆ ಶುಂಭ-ನಿಶುಂಭರ ಜೊತೆಗೆ, ಚಂಡ-ಮುಂಡ, ರಕ್ತಬೀಜ ಮುಂತಾದ ರಾಕ್ಷಸರನ್ನು ಸಂಹರಿಸಿದಳು. ದೇವಿಯ ಈ ಅತ್ಯದ್ಭುತ ಜಯದ ಸಂತೋಷದಿಂದ ದೇವತೆಗಳು ದೇವಿಯನ್ನು ಅತಿ ಕೃತಜ್ಞತೆಯಿಂದ ಸ್ತುತಿಸಿದರು. ಆ ಸ್ತುತಿಯೇ ನಾರಾಯಣಿ ಸ್ತುತಿ. ಈ ರೀತಿ ದುರ್ಗಾ ಸಪ್ತಶತಿಯಲ್ಲಿ ದುರ್ಗಾಪರಮೇಶ್ವರಿ ದೇವಿಯನ್ನು ನಾಲ್ಕು ವಿಧವಾಗಿ ಅತಿಸುಂದರವಾಗಿ ವರ್ಣಿಸಲಾಗಿದೆ.

**ಅಪರಾಜಿತಾ ಸ್ತೋತ್ರ**

ಇಂದ್ರಾದಿ ದೇವತೆಗಳು ದೇವಿಯನ್ನು ಅಪರಾಜಿತಾ ಎಂಬುದಾಗಿ ಸ್ತುತಿಸಿದರು. ಏಕೆಂದರೆ ದೇವಿಯು ಎಲ್ಲೆಡೆಯೂ ಶಕ್ತಿ ರೂಪದಲ್ಲಿ ಇದ್ದು ಮತ್ತು ಎಲ್ಲಾ ಆಗುಹೋಗುಗಳ ಅರಿವಿರುವುದರಿಂದ ಅವಳನ್ನು ಯಾವುದೇ ಒಂದು ಶಕ್ತಿಯು ಸೋಲಿಸಲು ಅಸಾಧ್ಯ. ದೇವಿಯನ್ನು ಪರಾಜಯಗೊಳಿಸಲು ಅಸಾಧ್ಯ. ಆದ್ದರಿಂದ ದೇವಿಯು ಅಪರಾಜಿತಾ. ಇಂದ್ರಾದಿ ದೇವತೆಗಳು ಮಾಡಿದ ಅಪರಾಜಿತಾ ಸ್ತೋತ್ರದ ಭಾವಾರ್ಥ ಹೀಗಿದೆ.

"ಮಹಾದೇವಿಗೆ ಪ್ರಾಣ ಪ್ರಣಾಮಗಳು. ಸದಾ ಸರ್ವರಿಗೂ ಮಂಗಲವನ್ನು ತೋರುವ ಶಕ್ತಿಯೇ ದೇವಿ. ಸದಾ ಆನಂದದಲ್ಲಿದ್ದು ಭಕ್ತರ ಮನೋಲ್ಲಾಸವನ್ನು ತರುವ ಶಕ್ತಿ. ಸದಾಶಿವನ ಅರ್ಧಅಂಗಿಯಾಗಿದ್ದು, ಭಕ್ತರಿಗೆ ಅನುಗ್ರಹ ನೀಡಿ ದುರ್ಗಮವಾದ ಕಷ್ಟಗಳನ್ನು ನೀಗುವ ಶಕ್ತಿಯೇ ದೇವಿ. ಎಲ್ಲೆಡೆ ಆಗುವ ವಿಷಯಗಳನ್ನು ತಿಳಿಯುವ ಹಾಗೂ ಎಲ್ಲಿಯೂ ಭೇದ ಭಾವಗಳನ್ನು ಮಾಡದ ಶಕ್ತಿಯೇ ದೇವಿ. ನಾವು ಯಾವ ದೇವಿಗೆ ಪ್ರಣಾಮಗಳನ್ನು ಮಾಡುತ್ತಿದ್ದೇವೆಯೋ ಆ ದೇವಿಯು ಕೋಮಲ ರೂಪದಲ್ಲಿ ಹಾಗೂ ಉಗ್ರ ರೂಪದಲ್ಲಿಯೂ ಪ್ರಕಟಗೊಳ್ಳುತ್ತಾಳೆ.  ಯಾವ ದೇವಿಯು ಎಲ್ಲ ಜಂತುಗಳಲ್ಲಿ ವಿಷ್ಣುಮಾಯೆಯೆಂದು ಕರೆಯಲ್ಪಡುತ್ತಾಳೋ ಅವಳಿಗೆ ನಮನ, ಅವಳಿಗೆ ನಮನ, ಅವಳಿಗೆ ನಮನ, ಮತ್ತೆ ಮತ್ತೆ ನಮನ. ಯಾವ ದೇವಿಯು ಎಲ್ಲ ಜಂತುಗಳಲ್ಲಿ ಚೈತನ್ಯವೆಂದೆನಿಸಿಕೊಳ್ಳುತ್ತಾಳೆಯೋ, ಹೀಗೆಯೇ ಯಾವ ದೇವಿಯು ಎಲ್ಲ ಜಂತುಗಳಲ್ಲಿ ಬುದ್ಧಿ, ನಿದ್ದೆ, ಹಸಿವು, ನೆರಳು, ಶಕ್ತಿ, ಬಾಯಾರಿಕೆ, ಸಹನೆ, ಪ್ರತ್ಯೇಕತೆ, ಲಜ್ಜೆ, ಶಾಂತಿ, ಶ್ರದ್ಧೆ, ಕಾಂತಿ, ಅದೃಷ್ಟ (ಲಕ್ಷ್ಮೀ), ಚಟುವಟಿಕೆ, ನೆನಪಿನ ಶಕ್ತಿ, ದಯೆ, ತೃಪ್ತಿ, ಮಾತೃಭಾವ ಹಾಗೂ ಭ್ರಾಂತಿ ರೂಪಗಳಲ್ಲಿ ನೆಲೆಸಿದ್ದಾಳೆಯೋ ಆ ದೇವಿಗೆ ನಮನ, ಅವಳಿಗೆ ನಮನ, ಮತ್ತೆ ಮತ್ತೆ ಅವಳಿಗೆ ನಮನಗಳು.

ಯಾವ ದೇವಿಯು ನಮ್ಮ ಎಲ್ಲ ಇಂದ್ರಿಯಗಳಿಗೂ ಅಧಿಷ್ಠಾತ್ರಿಯಾಗಿ ಎಲ್ಲೆಡೆಯಲ್ಲಿಯೂ ವ್ಯಾಪಿಸಿರುವಳೋ ಆ ಶಕ್ತಿ ರೂಪಿಣಿಗೆ ನಮನಗಳು ಮತ್ತೆ ನಮನಗಳು. ಯಾರು ಚೈತನ್ಯ ರೂಪಿನಲ್ಲಿ ವಿಶ್ವಾದ್ಯಂತ ವ್ಯಾಪಿಸಿರುವಳೋ ಆ ದೇವಿಗೆ ನಮನ, ಅವಳಿಗೆ ನಮನ, ಅವಳಿಗೆ ನಮನ, ಮತ್ತೆ ಮತ್ತೆ ನಮನಗಳು."  ದೇವತೆಗಳ ಧ್ಯೇಯ ಸಾಧನೆಗೆ ಸದಾ ಇಂದ್ರಾದಿ ದೇವತೆಗಳಿಂದ ಪೂಜಿಸಲ್ಪಡುವ, ಸದಾ ಮಂಗಳ ಸ್ವರೂಪಿಣಿಯಾದ ದೇವಿಯು ಅಸುರರು ದೇವತೆಗಳಿಗೆ ನೀಡುತ್ತಿರುವ ಕಷ್ಟಗಳನ್ನು ನಿವಾರಿಸಲಿ ಎಂದು ದೇವತೆಗಳು ಭಕ್ತಿಯಿಂದ ಪ್ರಾರ್ಥಿಸುತ್ತಾರೆ. ಪ್ರಸ್ತುತ ದಿತಿಯ ಪುತ್ರರಾಗಿ ಗರ್ವದಿಂದ ತುಂಬಿರುವ ದೈತ್ಯರೆನಿಸಿದ ಶುಂಭ ಹಾಗೂ ನಿಶುಂಭರು ದೇವತೆಗಳಿಗೆ ನೀಡುತ್ತಿರುವ ಕಷ್ಟಗಳನ್ನು ಈ ಕ್ಷಣವೇ ನಿವಾರಿಸಲೆಂದು ಪ್ರಾರ್ಥಿಸುತ್ತಾರೆ.



**ಸಾರಾಂಶ**

ಈಗ ನಾವು ನೋಡಿದ ಅಪರಾಜಿತಾ ಸ್ತೋತ್ರದಲ್ಲಿ ಪ್ರಾರ್ಥನೆ ಹಾಗೂ ಆಧ್ಯಾತ್ಮಿಕ ತತ್ವಗಳು ತುಂಬಿವೆ. ರಾಕ್ಷಸೀ ಶಕ್ತಿಗಳೆಂದರೆ ಅಹಂಕಾರ ತುಂಬಿ ಕಾಮ, ಕ್ರೋಧ, ಲೋಭ, ಮೋಹ, ಮದ ಹಾಗೂ ಮಾತ್ಸರ್ಯ ಎಂಬ ದುರ್ಗುಣಗಳು. ಇವುಗಳನ್ನು ಯಾರು ಒಳಗೆ ತಂದುಕೊಂಡು ಆ ದುರ್ಗುಣಗಳು ಮಾಡಿಸಿದಂತೆ ಮಾಡಿದಾಗ ಅವರು ರಾಕ್ಷಸೀ ಕೃತ್ಯಗಳನ್ನು ಮಾಡುತ್ತಾರೆ. ಆಗ ಅವರು ಶುಂಭ-ನಿಶುಂಭ, ಚಂಡ-ಮುಂಡ, ಮಹಿಷಾಸುರ, ರಕ್ತಬೀಜ ಇತ್ಯಾದಿ ರಾಕ್ಷಸರಂತಾಗುತ್ತಾರೆ. ಈ ರಾಕ್ಷಸೀ ಗುಣಗಳ ವಿನಾಶಕಾರಿ ಶಕ್ತಿಗಳನ್ನು ನಿರ್ಮೂಲನ ಮಾಡಬೇಕೆಂದರೆ ಸರ್ವವ್ಯಾಪಕ ಹಾಗೂ ಸದಾ ಮಂಗಳಕರವಾದ ದೇವಿಶಕ್ತಿಯನ್ನು ಪ್ರಾರ್ಥಿಸಿ, ಅವಳ ಅನುಗ್ರಹ ಹಾಗೂ ಸಹಾಯ ಕೋರಿದಾಗ, ಆ ದೇವೀ ಶಕ್ತಿಯು ಆಸುರೀ ಶಕ್ತಿಗಳನ್ನು ನಿರ್ಮೂಲನ ಮಾಡುತ್ತದೆ. ಆಸುರೀ ಶಕ್ತಿಗಳು ಪ್ರಧಾನವಾಗಿ ರಾಜಸಿಕ ಹಾಗೂ ತಾಮಸಿಕ ಶಕ್ತಿಗಳು. ದೇವೀ ಶಕ್ತಿಯು ದೈವಿಭಾವ, ಸಾತ್ವಿಕತೆ ಮತ್ತು ನೆಮ್ಮದಿಯನ್ನು ನೀಡುವ ಗುಣಗಳು. ಆದ್ದರಿಂದ ಈ ಸ್ತೋತ್ರದ ಮುಖ್ಯ ಸಂದೇಶವೇನೆಂದರೆ ಜೀವನದಲ್ಲಿ ಶಾಂತಿ ಹಾಗೂ ಆನಂದವನ್ನು ಪಡೆಯಬೇಕೆಂಬ ವ್ಯಕ್ತಿಯು ತನ್ನಲ್ಲಿರುವ ಆಸುರೀ ಶಕ್ತಿಗಳನ್ನು ಶುದ್ಧ ಭಕ್ತಿಯಿಂದ ಸಾಧನೆಯ ಮೂಲಕ ದೇವಿಯ ಶಕ್ತಿಯನ್ನು ಪಡೆದು ಅದರಿಂದ ಚಿತ್ತ ಶುದ್ಧಿ ಹಾಗೂ ಮನಶುದ್ಧಿ ಪಡೆದು ಸದಾ ಶಾಂತಿ ಹಾಗೂ ಆನಂದದಲ್ಲಿ ನೆಲಸಬೇಕು.



# ಮಳೆ ಬಂತು ಮಳೆ



*ದಾಶರಥಿ ಘಟ್ಟು*

ಅಕ್ಷರ ಕಲಿತು, ಊರಿನ ಪ್ರೈಮರಿ ಶಾಲೆಯಲ್ಲಿ ಕನ್ನಡ ಓದಿ, ಬರೆದು ಮಾಡುತ್ತಿದ್ದ ದಿನಗಳಲ್ಲಿ

"ಮಳೆ ಬಂತು ಮಳೆ

ಮನೆಗೆ ಬಂತು ಬೆಳೆ

ಜನಕೆ ತಂತು ಕಳೆ

ಮಳೆ ಬಂತು ಮಳೆ "

ಎಂಬ ಅಮೋಘ ಕವನವನ್ನು ಯಾರೋ ಹಿರಿಯ ಹುಡುಗರ ಪೆನ್ಸಿಲ್ ಎರವಲು ಪಡೆದು, ಒಂದು ಹಾಳೆಯ ಮೇಲೆ ಬರೆದು, ಗೊತ್ತಿದ್ದವರ ಮನೆಗಳಿಗೆಲ್ಲಾ ತಿರುಗಿ ಪ್ರದರ್ಶಿಸಿದ್ದೆ. ಆ ಚೀಟಿ ಹಿಡಿದು ತಿರುಗುವಾಗ ನನ್ನ ಹಿಂದೆ ಮೂರ್ನಾಲ್ಕು ನನ್ನ ದೋಸ್ತಿ ಹಿಂಬಾಲಕರು ಬೇರೆ. ಕೆಲಸ ಮುಗಿಸಿಕೊಂಡು ಮನೆಗೆ ಬಂದ ನಮ್ಮ ತಂದೆ ಕೂಡಾ ಅದನ್ನು ಓದಿ ಉಬ್ಬಿಹೋಗಿದ್ದರು.

ಬಯಲು ಸೀಮೆಯ ಬರಗಾಲದ ಜಿಲ್ಲೆ ಕೋಲಾರದಲ್ಲಿರುವ ನಮ್ಮೂರಿನವರಿಗೆ ಮಳೆಯಾಗುವುದೆಂದರೆ ದೊಡ್ಡ ಸಂಭ್ರಮ. ಬೇಸಿಗೆಯಲ್ಲಿ ಬಿಸಿಲು ಚೆನ್ನಾಗಿ ಕಾದು, ಹುಣಿಸೆ ಕಾಯಿ, ಮಾವಿನ ಕಾಯಿ, ಹೊಂಗೆ ಕಾಯಿಗಳ ಕೆಲಸವೆಲ್ಲಾ ಮುಗಿದು, ಜೂನ್ ಹೊತ್ತಿಗೆ ರೈತರು ಖಾಲಿ ಕುಳಿತಿರುವಾಗ, ಮಳೆಗಾಗಿ ಪರಿತಪಿಸತೊಡಗುತ್ತಾರೆ. "ಭರಣಿ ಬಂತು, ಮಳೆ ಬರಲಿಲ್ಲ... ಆರಿದ್ರ ಸುರಿದರೆ ದರಿದ್ರ ಹೋಗುತ್ತೆ.... ಮಘಾ ನಕ್ಷತ್ರದಲ್ಲಾದರೂ ಜಾಸ್ತಿ ಮಳೆಯಾಗಬೇಕು...." ಇವೇ ಮಾತುಗಳನ್ನೇ ಜನ ಗುನುಗುನಿಸುತ್ತಿರುತ್ತಾರೆ. ಮಳೆ ಬಂದರೆ ಕೆರೆ ಕುಂಟೆಗಳಿಗೆ ನೀರು, ದನಕರುಗಳಿಗೆ ಮೇಯಲು ಹಸಿರು, ರೈತರಿಗೆ ರಾಗಿ, ಜೋಳ, ಅವರೆ, ಅಲಸಂದೆ, ನೆಲಗಡಲೆಗಳ ಬಿತ್ತನೆ.

ಕಮ್ಮಿ ಮಳೆ ಬೀಳುವ ನಮ್ಮೂರಿನಲ್ಲಿ ಮಳೆ ಬರುತ್ತದೆಂದರೇ ಬಹಳ ಸಂಭ್ರಮವಿರುತ್ತಿತ್ತೆಂದು ಮೊದಲೇ ಹೇಳಿದ್ದೇನೆ. ಹೊಲಗದ್ದೆಗಳಲ್ಲಿ

ಕೆಲಸ ಮಾಡುತ್ತಲೋ, ಬಯಲುಗಳಲ್ಲಿ ಕುರಿ ಮೇಕೆಗಳನ್ನು ಮೇಯಿಸುತ್ತಲೋ ಇರುತ್ತಿದ್ದವರು, ಮೋಡ ಮುಚ್ಚಿಕೊಂಡು ನಾಲ್ಕು ಹನಿ ಹಾಕುವಷ್ಟರಲ್ಲಿ ಊರ ಕಡೆ ಧಾವಿಸುತ್ತಿದ್ದರು. ಮಳೆಯಲ್ಲಿ ನೆಂದುಹೋದರೆ, ಅನೇಕರ ಬಳಿ ತೊಡಲು ಬೇರೆ ಬಟ್ಟೆಯಿರುತ್ತಿರಲಿಲ್ಲ. ಮನೆ ಮಂದಿಯೆಲ್ಲಾ ರೈತಾಪಿ ಕೆಲಸಗಳಿಗಾಗಿ ಹೊರಗೆ ಬಂದಿದ್ದಾಗ, ಮನೆಯ ಮಾಡಿನಲ್ಲಿ ಒಣಗಹಾಕಿದ ಬಟ್ಟೆ-ಬರೆ, ಕಟ್ಟಿಗೆ ಇತ್ಯಾದಿಗಳನ್ನು ರಕ್ಷಿಸಿಕೊಳ್ಳುವ ತವಕ ಒಂದಷ್ಟು ಜನಗಳಿಗೆ. ಮಳೆಯಲ್ಲಿ ನೆಂದುಬಿಟ್ಟರೆ ನೆಗಡಿ ಬಂದುಬಿಡುತ್ತದೆಂಬ ಹೆದರಿಕೆ ಕೆಲವರಿಗೆ.

ಊರಿನಲ್ಲಿದ್ದ ಕಾಲದಲ್ಲಿ, ಎಂಥಾ ಮಳೆಯಲ್ಲೂ ಛತ್ರಿ ಹಿಡಿದು ಓಡಾಡಿದ್ದೇ ಇಲ್ಲ. ಮನೆಯಲ್ಲಿ ಛತ್ರಿ ಇದ್ದರೆ ತಾನೇ ಅದನ್ನು ಹಿಡಿದು ಓಡಾಡುವುದು. ನಮ್ಮ ಮಾವನ ಮನೆಯಲ್ಲಿ, ಅವರು ಯಾವುದೇ ತಿಥಿಯ ಪೌರೋಹಿತ್ಯಕ್ಕೆ ಹೋದಾಗ ಕೊಟ್ಟಿದ್ದ ಒಂದು ಛತ್ರಿ ಇತ್ತು. ಅದು ಅವರಿಗೆ ಮಾತ್ರ ಮೀಸಲಾಗಿತ್ತು. ಮಳೆ ಶುರುವಾಗಿ, ನಾವೇನಾದರೂ ಹೊರಗಡೆ ಇದ್ದರೆ, ಹತ್ತಿರದ ಯಾವುದಾದರೂ ದದ್ದನಕ್ಕೋ, ಪಾಳು ಬಿದ್ದ ಗುಡಿಸಲಿಗೋ ಸೂರಿಗಾಗಿ ಓಡುವುದು.

ಅಂತಹ ಅನುಕೂಲಗಳಿಲ್ಲದ ಪ್ರದೇಶಗಳಲ್ಲಿ, ಹತ್ತಿರದ ಮರದ ಕಡೆ ಓಡಿ, ದೊಡ್ಡ ಕೊಂಬೆಯ ಕೆಳಗೆ, ಕಾಂಡಕ್ಕೆ ಒತ್ತಿ ನಿಲ್ಲುವುದು. ಆಗೆಲ್ಲಾ ಊರಿನ ಸುತ್ತಾ ಎಲ್ಲೆಲ್ಲೂ ಹುಣಿಸೇಮರಗಳೂ, ಅರಳಿ ಮತ್ತು ಆಲದ ಮರಗಳು ಇದ್ದವು. ಮರ ತುಂಬಾ ಎತ್ತರವಿದ್ದರೆ ಏನೇನೂ ಉಪಯೋಗವಾಗುತ್ತಿರಲಿಲ್ಲ. ಅದು ಛತ್ರಿಯಂತೆ ಹಬ್ಬಿದ್ದರೆ ಸ್ವಲ್ಪ ರಕ್ಷಣೆ. ಹೇಗೇ ಆದರೂ ಬೇಗ ಮಳೆ ನಿಂತರೆ ಸರಿ. ಇಲ್ಲದಿದ್ದರೆ ಮಳೆ ನಿಲ್ಲುವಷ್ಟರಲ್ಲಿ ಎಲ್ಲರೂ ತೋಯ್ದು ತೊಪ್ಪೆಯಾಗಿ, ಬಟ್ಟೆಗಳಿಂದ ತೊಟ್ಟಿಕ್ಕುವ ನೀರು.

ಮಳೆಯಲ್ಲಿ ಅನಿವಾರ್ಯವಾಗಿ ಹೊರಗೆ ಹೋಗಬೇಕು, ಇಲ್ಲಾ ಕೆಲಸ ಮಾಡಬೇಕು ಎಂದಾಗ, ನಮ್ಮ ರಕ್ಷಣೆಗೆ ಬರುತ್ತಿದ್ದುದು ಹಳೇ ಗೋಣೀಚೀಲ. ಚೀಲವನ್ನು ಉದ್ದುದ್ದ ಮಧ್ಯೆ ಒಳಕ್ಕೆ ಮಡಚಿ, ಗೊಬರು ಮಾಡಿಕೊಂಡು ತಲೆಯಿಂದ ಬೆನ್ನ ಮೇಲೆ ಹಾಕಿಕೊಂಡರೆ ನಮ್ಮ ಪಾಂಚೋ ಸಿದ್ಧ. ಅಂತಹ ಗೋಣೀಚೀಲದ ಗೊಬರನ್ನು



ಮೈ ಮೇಲೆ ಹಾಕಿಕೊಂಡು ಹೊಲಗದ್ದೆಗಳಿಗೆ ಹೋಗುತ್ತಿದ್ದ ಚಿತ್ರ ಈಗಲೂ ಕಣ್ಣಿಗೆ ಕಟ್ಟಿದಂತಿದೆ. ಒಂದು ದಿನ, ಹೊಲದಲ್ಲಿದ್ದಾಗ ಮಳೆ ಪ್ರಾರಂಭವಾಗಿ, ಜೋರಾಗಿ ಸುರಿಯತೊಡಗಿತು. ಜನ ದಾರಿಯ ಇಕ್ಕೆಡೆಗಳಲ್ಲೂ ನಿಂತು ಹೂವಿನ ಪಟಲಗಳನ್ನು ಎರಚುವಾಗ ರಾಜ ನಿಧಾನವಾಗಿ ನಡೆದುಬರುವಂತೆ, ನಾನು ಆ ಮಳೆಯಲ್ಲಿ ನಡೆದು ಮನೆಗೆ ಬರುತ್ತಿದ್ದೆ. ಧೋ ಎಂದು ಸುರಿಯುತ್ತಿದ್ದ ಮಳೆಯಲ್ಲಿ ತೋಯ್ದು ತೊಪ್ಪೆಯಾದ ಬಟ್ಟೆಗಳಲ್ಲಿ ನಡೆದುಬಂದ ಆ ಅನುಭವವೇ ಅವರ್ಣನೀಯ. ಆ ದಿನ ಹಾಗೆ ನಡೆಯುತ್ತಾ ದೇವಸ್ಥಾನದ ಹತ್ತಿರ ಬಂದಾಗ, ಮನೆಯೊಳಗಡೆ ನಿಂತು ಮಳೆ ನೋಡುತ್ತಿದ್ದ ನಮ್ಮ ರಾಜಯ್ಯಂಗಾರ್ ಮೇಷ್ಟ್ರು, "ಏನೋ, ನಿಂಗೇನು ಹುಚ್ಚೇನೋ. ಮಳೆಯಲ್ಲಿ ನೆನೆಯಬೇಡ ಮನೆಗೆ ಓಡೋ" ಎಂದು ಕಿರುಚಿ ಹೇಳಿದ್ದು, ಇನ್ನೂ ಕಿವಿಗಳಲ್ಲಿದೆ.

ಊರಿನ ಚರಂಡಿಗಳೆಲ್ಲಾ ಹೂಳು ತುಂಬಿ ಮುಚ್ಚಿಹೋಗಿದ್ದರಿಂದ, ಸ್ವಲ್ಪ ಜೋರು ಮಳೆ ಬಂದರೆ, ನೀರು ಬೀದಿಗಳಲ್ಲೇ ಹರಿಯುತ್ತಿತ್ತು.

ಒಂದು ದಿನ ರಾತ್ರಿ ಭಯಂಕರ ಜೋರು ಮಳೆಯಾಗಿ, ಮನೆ ಮುಂದಿನ ರಸ್ತೆಯಲ್ಲಿ ನೀರು ಭೋರೆಂದು ಹರಿಯುತ್ತಿತ್ತು. ಅಜ್ಜಿ ಮತ್ತು ಚಿಕ್ಕಪ್ಪ ಬೆಂಗಳೂರಿಗೆ ಹೋಗಿದ್ದರು. ನಮ್ಮ ತಂದೆಯವರೂ ಊರಲ್ಲಿರಲಿಲ್ಲ. ಮನಯಲ್ಲಿದ್ದವರು ಅಮ್ಮ ಮತ್ತು ನಾವು ಸಣ್ಣ ಹುಡುಗರು. ಆ ರಾತ್ರಿಯೋ ಮಳೆಯ ಜೊತೆ, ವಿಪರೀತ ಗುಡುಗು, ಸಿಡಿಲುಗಳ ಆರ್ಭಟೆ. ಬೀದಿಯಲ್ಲಿ ಹರಿಯುತ್ತಿದ್ದ ನೀರು ಮನೆಯೊಳಕ್ಕೆ ನುಗ್ಗಿಬಿಡುತ್ತೇನೋ ಎಂಬ ಭಯ. ಹಜಾರದಲ್ಲಿ ಸಾಲಾಗಿ ಹಾಸಿಕೊಂಡು ಅಮ್ಮನ ಪಕ್ಕ ಮಲಗಿದ್ದ ನಾವು, ಪ್ರತಿ ಸಲ ಗುಡುಗಿದಾಗಲೂ ನಡುಗಿಹೋಗುತ್ತಿದ್ದೆವು. ರಾತ್ರಿ ಯಾವಾಗಲೋ ನಿದ್ದೆ ಹತ್ತಿ, ಬೆಳಗ್ಗೆ ಏಳುವಷ್ಟರಲ್ಲಿ ಆಕಾಶ, ಭೂಮಿ ಎರಡೂ ತೊಳೆದು ಒಣಗಲು ಹಾಕಿದಂತೆ ಶುಭ್ರವಾಗಿತ್ತು!



ಬೆಂಗಳೂರಲ್ಲಿ ಇದ್ದಾಗಿನ ಮಳೆಯ ಅನುಭವವೇ ಬೇರೆ. ಮಳೆ ಸುರಿದ ತಕ್ಷಣ ಬೆಂಗಳೂರಿನ ವಾತಾವರಣ ತಂಪಾಗಿಬಿಡುತ್ತದೆ. ಮಳೆಯಲ್ಲೇನಾದರೂ ನೆಂದು ಬಿಟ್ಟರೆ ಮೈನಡುಕ ಶುರುವಾಗಿಬಿಡುತ್ತದೆ. ಇದು ೨೦ ವರ್ಷ ಹಿಂದಿನ ಮಾತು. ಈಗ ಹೇಗೋ ನನಗೆ ಗೊತ್ತಿಲ್ಲ. ಇನ್ನು ಬೆಂಗಳೂರಿನಲ್ಲಿ ಮಳೆ ಎಂದರೆ, ದಿನವಿಡೀ ಜಿಟಿಜಿಟಿ ತೊಟ್ಟಿಕ್ಕುತ್ತಲೇ ಇರುವ ಜಡಿ ಮಳೆ.

ಆ ಮಳೆಯಲ್ಲಿ ಕೊಚ್ಚೆ ಗುಂಡಿಗಳನ್ನು ದಾಟಿಕೊಂಡು, ಕೆಲವು ಕಡೆ ಕೆಸರಲ್ಲಿ ಕಾಲಿಟ್ಟು, ಹವಾಯ್ ಚಪ್ಪಲಿಯಿಂದ ಪ್ಯಾಟಿನ ಹಿಂಭಾಗಕ್ಕೆಲ್ಲಾ ಗಲೀಜು ಪ್ರೋಕ್ಷಣೆಯನ್ನು ಮಾಡಿಸಿಕೊಂಡು, ಬಿಟಿಎಸ್ ಬಸ್ ಹಿಡಿದು, ಸ್ಕೂಲಿನಿಂದಲೋ, ಕೆಲಸದಿಂದಲೋ ಮನೆ ಸೇರಿಕೊಂಡರೆ, ಪಿಳಿ ಪಿಳಿ ಕಣ್ಣು ಬಿಟ್ಟುಕೊಂಡು ಒಂದು ಮೂಲೆಯಲ್ಲಿ ಕೂತಿರುವುದಷ್ಟೇ ಕೆಲಸ.

ಮಳೆ ಬರುವಾಗ ರಸ್ತೆಯಲ್ಲಿದ್ದರೆ ಹತ್ತಿರದ ಅಂಗಡಿ ಮುಂಗಟ್ಟುಗಳ ಮುಂದೆಯೋ, ಕಾಂಪೌಂಡ್ ಇಲ್ಲದ ಮನೆಗಳ ಮುಂದೆಯೋ, ಬಸ್ ಸ್ಟಾಪ್ ಗಳ ಶೆಲ್ಟರ್ ಗಳ ಕೆಳಗೋ ಹೋಗಿ ನಿಲ್ಲುವುದು. ಒಬ್ಬನೇ ನಿಂತಿದ್ದಾಗ ಕೆಲವು ಮನೆಯವರು ಒಳಗೆ ಕರೆದು ಕೂಡಿಸಿಕೊಂಡಿದ್ದೂ ಉಂಟು. ಈಗಿನ ಕಾಲದಲ್ಲಿ ಮನೆಯೊಳಕ್ಕೆ ಯಾರೂ ಕರೆಯುವುದಿಲ್ಲ ಎಂದುಕೊಂಡಿದ್ದೇನೆ. ನನಗೆ ಅರ್ಥವಾಗದ ಆ ದಿನಗಳ ಇನ್ನೊಂದು ಪ್ರಕ್ರಿಯೆ, ಮಳೆಯಿಂದ ರಕ್ಷಣೆ ಪಡೆಯಲು ನಾವು ಕರ್ಚೀಫನ್ನು ತಲೆಯ ಮೇಲೆ ಹಾಕಿಕೊಂಡು, ಅದು ಗಾಳಿಗೆ ಹಾರಿಹೋಗದಂತೆ ಮುಂದೆ ಮತ್ತು ಹಿಂದೆ ಗಂಟು ಹಾಕಿಕೊಂಡು ಓಡಾಡುತ್ತಿದ್ದುದು.

ನಾನು ಗೋವೆಯಲ್ಲಿ ನೌಕರಿ ಹಿಡಿದು ಪೋಂಡ ಪಟ್ಟಣ ಸೇರಿದ ಮೇಲೆ ಕರಾವಳಿಯ ಮಳೆಯ ಸೊಬಗನ್ನು ನೋಡ ತೊಡಗಿದೆ. ಮಾನ್ಸೂನ್ ಹತ್ತಿರ ಬರುತ್ತಿದ್ದಂತೆ ಅಲ್ಲಿನ ಬಜಾರ್ ರಸ್ತೆಯ ಪ್ರತಿ ಅಂಗಡಿಯಲ್ಲೂ ಬಟನ್ ಛತ್ರಿಗಳೂ, ಕೊಕ್ಕೆ ಕೊಡೆಗಳೂ, ರೈನ್ ಕೋಟುಗಳೂ, ಪ್ಲಾಸ್ಟಿಕ್ ಪ್ಯಾಂಟ್-ಷರ್ಟ್ ಗಳೂ, ರಬ್ಬರ್ ಚಪ್ಪಲಿ ಬೂಟುಗಳೂ ತುಂಬಿ ತುಳುಕತೊಡಗುತ್ತವೆ. ಆದರೆ ಮಳೆ ಆರಂಭವಾಗುವವರೆಗೂ ಯಾರೂ ಕೊಳ್ಳುವ ಉಸಾಬರಿಗೆ ಹೋಗುವುದಿಲ್ಲ. ಮಾನ್ಸೂನ್ ಮಳೆ ಶುರುವಾಯಿತೋ, ಎಲ್ಲರ ಗಮ್ಯ ರೈನ್ ವೇರ್ ಕೊಳ್ಳುವುದಕ್ಕೆ. ಆ ಸಮಯದಲ್ಲಿ ನೋಡಬೇಕು-

ಹೊರಗೆ ಸುರಿಯುವ ಮಳೆ, ತೊಟ್ಟಿಕ್ಕುವ ಬಟ್ಟೆಗಳಿಂದ ಊರೆಲ್ಲಾ ಒದ್ದೆ ಮಾಡುತ್ತಾ ಅಂಗಡಿಯ ಒಳಗೆ ಕಿಕ್ಕಿರಿಯುವ ಜನ, ಮಾತು, ನಗು, ಚೌಕಾಶಿ, ಕಿರಿಚಾಟ, ನುಗ್ಗಾಟ- ಅವೇ ಒಂದು ರೀತಿಯ ಅನನ್ಯ ಘಳಿಗೆಗಳು. ಇನ್ನು ಗೋವೆಯಲ್ಲಿಯ ಮಳೆ, ಮುನ್ಸೂಚನೆಯಿಲ್ಲದೆ ಧೋ ಎಂದು ಸ್ವಲ್ಪ ಹೊತ್ತು ಭರ್ಜರಿಯಾಗಿ ಸುರಿದು, ಸೂರ್ಯ ಅಟ್ಟಿಸಿಕೊಂಡು ಬಂದನೇನೋ ಎಂಬಂತೆ ಓಡಿಹೋಗುತ್ತದೆ. ಮಧ್ಯೆ ನಾಲ್ಕೈದು ದಿನ ಎಡಬಿಡದೆ ಸೋನೆ ಮಳೆ ಸುರಿಯುತ್ತಿರುತ್ತದೆ.

ಸಂವಹನ ನಿಲ್ಲಿಸಿಬಿಟ್ಟಿದ್ದೇವೆ ಎನಿಸುತ್ತದೆ. ವೆದರ್ ಚಾನಲ್ಲುಗಳು ದಿನ ವಾರಗಳ ಮೊದಲೇ "ಯಾವಾಗ, ಎಷ್ಟು, ಎಲ್ಲಿ" ಮಳೆ ಬರುತ್ತದೆಂದು ಪ್ರತಿ ಎರಡು ನಿಮಿಷಕ್ಕೂ ಬಿತ್ತರಿಸಿ, ಮಳೆ ಬರುವುದು ಕೂಡಾ ಅಮೆಝೋನ್ ಪ್ರೈಮ್ ನಲ್ಲಿ ಬರುವ ತರಕಲಾಂಡಿ ವಸ್ತುವಿನಂತೆ ತೋರುತ್ತದೆ. ಎಷ್ಟು ಮಳೆ ಯಾವಾಗ ಬರುತ್ತದೆಂದು ಗೊತ್ತಾದ ನಾವು, ಮಳೆಯ ಒಂದು ಹನಿಯೂ ನಮ್ಮ ಮೇಲೆ ಬೀಳದಂತೆ ಮನೆಗಳಲ್ಲೋ, ಕಾರುಗಳಲ್ಲೋ ಭದ್ರವಾಗಿ ಬಂದಿಯಾಗಿಬಿಡುತ್ತೇವೆ.



ಮಳೆ ಸುರಿಯುವಾಗ ಮನೆ ಮುಂದಿನ ರಸ್ತೆಗೋ, ಮನೆ ಹಿಂದಿನ ಜಾಗಕ್ಕೋ ಹೋಗಿ ಮನಸಾರೆ ನೆನೆಯಬೇಕೆಂಬ ಆಸೆ ತುಂಬಾ ದಿನಗಳಿಂದ ನನ್ನ ಮನಸ್ಸಿನಲ್ಲಿ ಸುಪ್ತವಾಗಿ ಕೂತಿತ್ತು.

ಜುಲೈ ತಿಂಗಳು ಇಂಡಿಪೆಂಡೆನ್ಸ್ ಡೇ ಲಾಂಗ್ ವೀಕೆಂಡ್ ನಲ್ಲಿ ಅಕೆಡಿಯ ರಾಷ್ಟ್ರೀಯ ಉದ್ಯಾನವನ್ನು ನೋಡಲು ಮೇನ್ ಗೆ ಹೋಗಿದ್ದಾಗ, ಒಂದು ಸಂಜೆ ವೆಕೇಷನ್ ಹೋಂ ನಲ್ಲಿ ಹರಟೆ ಹೊಡೆಯುತ್ತಾ ಕೂತಿದ್ದೆವು. ಹೊರಗೆ ಹ್ಯುಮಿಡಿಟಿಯಿಂದಾಗಿ ಬಿಸಿಲ ಧಗೆ ಇತ್ತು. ಸ್ವಲ್ಪ ಮಳೆ ಬಂದರೆ ಹವಾಮಾನ ತಂಪಾಗುತ್ತದೆ ಎಂದುಕೊಳ್ಳುತ್ತಿದ್ದಾಗಲೇ, ಗುಡುಗಿನ ಸದ್ದು ಕೇಳಿತು.


ಮಳೆಗಾಲದಲ್ಲಿ ಗೋವಾ ನಿಜವಾಗಿಯೂ ಸಸ್ಯ ಶ್ಯಾಮಲೆ. ಎಲ್ಲಿ ನೋಡಿದರೂ ಸಣ್ಣ ಸಣ್ಣ ತೊರೆಗಳು, ಸ್ನಾನ ಮಾಡಿ ಹಸಿರು ಮಡಿಯುಟ್ಟಂತೆ ಇರುವ ಗಿಡ ಮರಗಳು, ಹಸಿರು ಚಾದರ ಹಾಸಿದಂತೆ ಬಯಲು. ಬೆಟ್ಟ ಗುಡ್ಡಗಳಂತೂ ಹೊಳೆಯುವ ಹಸಿರು ರೇಷ್ಮೆ ಉಟ್ಟಂತಿರುತ್ತವೆ. ಅಲ್ಲಲ್ಲಿ ಕಾಡು ಹೂಗಳ ವಿನ್ಯಾಸ ಬೇರೆ. ಆ ಸಮಯದಲ್ಲಿ ಸುತ್ತಲಿನ ಹಳ್ಳಿಗರು ತರುವ ತೋಷಿ, ಬೆಂಡೆಕಾಯಿ, ಹೀರೇ ಕಾಯಿಗಳ ರುಚಿ ಅನನ್ಯ. ಮೀನು ತಿನ್ನುವ ಗೋವೆಯ ಜನಕ್ಕಂತೂ ಅದು ಸುಗ್ಗಿಯ ಕಾಲ.

ಅಮೇರಿಕಾದಲ್ಲಿ ಮಳೆಗೆ ಜೀವಂತಿಕೆಯೇ ಇಲ್ಲ ಎನಿಸುತ್ತಿತ್ತು. ಅದು ನಮ್ಮ ತಪ್ಪು. ಇಲ್ಲಿನ ಮಳೆಯೂ ಎಲ್ಲ ಕಡೆಯ ಮಳೆಯಂತೆ ಜೀವಂತ ಪ್ರಕ್ರಿಯೆಯೇ. ಆದರೆ ನಾವು ಮಾತ್ರ ಅದರ ಜೊತೆಗಿನ

ಸಾಗರದ ಹಿನ್ನೆಲೆಯಲ್ಲಿ ಮಳೆ ಹನಿಗಳ ಸೊಬಗನ್ನು ನೋಡೋಣವೆಂದು, ಬಾಲ್ಕನಿಗೆ ಹೋಗಿ ಕುಳಿತೆ. ಮಳೆ ಜೋರಾಗುತ್ತಿದ್ದಂತೆ ಒಳಗಿದ್ದವರೆಲ್ಲಾ ಒಬ್ಬೊಬ್ಬರಾಗಿ ಹೊರಗ ಬಂದರು. ಆಗ ಅಚಾನಕ್ಕಾಗಿ ಮಳೆಯಲ್ಲಿ ನೆನೆಯುವ ನನ್ನ ಆಸೆ ಭುಗಿಲೆದ್ದಿತು. ಬಾಲ್ಕನಿಯ ಸೂರಿನಿಂದ ಹೊರಗೆ ಹೋಗಿ, ಮಳೆಯ ಹನಿಗಳಿಗೆ ಮುಖ ಒಡ್ಡಿ ನಿಂತೆ. ನನ್ನ ಜೊತೆ ಅಲ್ಲಿದ್ದ ಇನ್ನೊಂದಿಬ್ಬರು ಸೇರಿಕೊಂಡರು. ಮಳೆ ಜೋರಾಗುತ್ತಿದ್ದಂತೆ, ತೊಟ್ಟಿದ್ದ ಬಟ್ಟೆಗಳು



# ಬೃಂದಾವನ ವನ ವಿಹಾರ



ಲಕ್ಷ್ಮಿ ಕೊಲ್ಲಾಲ

ಚುಮು ಚುಮು ಚುಮು ಶನಿವಾರದ ಸೂರ್ಯೋದಯವಾಯಿತು.ಬಂತು ಬಂತು ಬಂತು ಕಾತರದಿಂದ ಕಾಯುತ್ತಲಿದ್ದ ಬೃಂದಾವನ ಪಿಕ್ನಿಕ್ ದಿನ ಬಂದೇ ಬಿಟ್ಟಿತು.

ಅಂದು ಜುಲೈ ೧೩ ರರ ಸುಂದರ ಬೇಸಿಗೆಯ ದಿನ...ಆಹಾ ಆ ದಿನದ ಹವಾಮಾನ ನಮ್ಮೆಲ್ಲರನ್ನೂ ಸ್ವಾಗತಿಸಿ ನ್ಯೂಜೆರ್ಸಿಯ ಹೈಲ್ಯಾಂಡ್ ಪಾರ್ಕ್ ಎಂಬ ಪ್ರದೇಶದ ಡೊನಾಲ್ಡ್ ಸನ್ ಪಾರ್ಕ್ ಗೆ ಬರಮಾಡಿಕೊಂಡಿತು.ಪ್ರತಿ ವರ್ಷದಂತೆ ಈ ವರ್ಷವೂ ಜರುಗಿದ ಪಿಕ್ನಿಕ್ ಬೃಂದಾವನ ಪರಿವಾರದ ಅತ್ಯಂತ ಆಕರ್ಷಣೀಯ ಕೊಡುಗೆ.

ಯೋಗಾಭ್ಯಾಸದಿಂದ ಶುರುವಾದ ದಿನ ಕಳೆದದ್ದು ತಿಳಿಯಲೇ ಇಲ್ಲ. ಎಲ್ಲ ವಯಸ್ಸಿನವರೂ ಸಂತೋಷದಿಂದ ಭಾಗವಹಿಸಲು ಅನುವು ಮಾಡಿಕೊಟ್ಟು ಆಟೋಟ ಸ್ಪರ್ಧೆಗಳನ್ನು ನಡೆಸಿ ನಿರ್ವಹಿಸಿದ ಸೌರಭತಂಡದ ಅಧ್ಯಕ್ಷರಾದ ಸತೀಶ್ ಹೊಸನಗರ ಮತ್ತೆಲ್ಲ ಸ್ವಯಂಸೇವಕರಿಗೂ ನಮ್ಮ ನಮನಗಳು.

ಪಾರ್ಕಿನ ಹಸಿರು ಮೈದಾನವನ್ನು ನೋಡುವುದೇ ರಮಣೀಯ ದೃಶ್ಯವಾದರೆ, ಅಲ್ಲಿ ಓಡಿ ಕುಪ್ಪಳಿಸಿದವರನ್ನು ನೋಡುವುದೊಂದು ಹಬ್ಬದಂತಿತ್ತು ಜೊತೆಗೆ ಕನ್ನಡ ಹಾಡುಗಳ ಇಂಪಾದ ಹಿನ್ನೆಲೆ ಈ ಸಂದರ್ಭದ ರಂಗನ್ನು ಏರಿಸುತ್ತಲೇ ಇತ್ತು.

ಇದರೊಂದಿಗೆ ಭರ್ಜರಿ ಅಡುಗೆಯ ರುಚಿಯಂತೂ ಮರೆಯಲಾಗದು ಇಡ್ಲಿ, ವಡೆ, ಚಟ್ನಿ ,ಪುಲಾವ್ ಒಂದೇ ಎರಡೇ ? ಪುಷ್ಕಳವಾದ ಊಟದೊಂದಿಗೆ ಬಿಸಿಯಾದ ಗರಿ ಗರಿ ದೋಸೆ ಜೊತೆಗೆ ತರಾವರಿ ಪಲ್ಯ ಮತ್ತು ಚಟ್ನಿಗಳ ಸಮಾಗಮವನ್ನು ಎಲ್ಲರೂ ಚಪ್ಪರಿಸಿದರು.ಮಧ್ಯೆ ನಿಂಬೆ ಪಾನಕ , ಮಜ್ಜಿಗೆ ಮತ್ತು ನೀರಿನ ಸರಬರಾಜು ಸಹಿತ ಇದ್ದದ್ದು ಬಲು ಹಿತಕರವಾಗಿತ್ತು .

ಇನ್ನು ಊಟವಾದ ನಂತರ ಕಳೆದ ಸಮಯವನ್ನು ಮೆಲುಕೋಣವೇ ?

ಈಗ ನೆನಪಾಗುವುದು ಮಕ್ಕಳ ಮತ್ತು ದೊಡ್ಡವರ ರನ್ನಿಂಗ್ ರೇಸ್ ಕಾರ್ಯಕ್ರಮ ..ಇದಕ್ಕಾಗಿ ಬಹಳ ಶ್ರಮವಹಿಸಿ ಅದ್ಭುತವಾಗಿ ನಡೆಸಿಕೊಟ್ಟ ಬೃಂದಾವನದ ಬೆನ್ನೆಲುಬಾದ ಉಷಾ ಪ್ರಸನ್ನ ಅವರಿಗೆ ಚಪ್ಪಾಳೆಗಳು.

ಎಲ್ಲ ಸ್ಪರ್ಧೆಯಲ್ಲಿ ಭಾಗವಹಿಸಿದ ಮತ್ತು ಗೆದ್ದ ಚೆಣ್ಣರ ಉತ್ಸಾಹ ಮತ್ತು ಹುಮ್ಮಸ್ಸು ಶ್ಲಾಘನೀಯವಾಗಿತ್ತು .ಇನ್ನೊಂದು ಮೈದಾನದಲ್ಲಿ ಕ್ರಿಕೆಟ್ ತಂಡಗಳು ಅವರದ್ದೇ ಪ್ರಪಂಚದಲ್ಲಿ ಮುಳುಗೇಳುತ್ತಿದ್ದರು ಅವರ ಸಂತೋಷಕ್ಕೂ ಪಾರವೇ ಇರಲಿಲ್ಲ. ಯುವ ಬೃಂದಾವನದ ತಂಡದ ಯುವಕ ಯುವತಿಯರು ಮೊದಲಿನಿಂದ ಕಡೆಯವರೆಗೆ ಆಟೋಟಗಳೊಂದಿಗೆ ಪಾರ್ಕಿನ ಸ್ವಚ್ಛತೆಯನ್ನು ಕಾಪಾಡುತ್ತಿದ್ದರು. ಯುವ ತಂಡವವರ ಕಾರ್ಯ ನಿರ್ವಹಣೆಯನ್ನು ಎಷ್ಟು ಹೊಗಳಿದರೂ ಸಾಲದು.

ನೋಡುತ್ತಿದ್ದಂತೆ ಸಂಜೆಯಾಗತೊಡಗಿದಾಗ ಮತ್ತೆ ಖಾದ್ಯಗಳ ಸೇವನೆ ತುಂಬಾ ಮುದವಾಗಿತ್ತು. ಭೇಲ್ ಪುರಿ , ಜಾಮೂನ್



ಮತ್ತು ಕಲ್ಲಂಗಡಿ ಹಣ್ಣಿನ ಆಸ್ವಾದನೆ ಮೈ ಮನಗಳನ್ನು ತಂಪುಗೊಳಿಸಿದವು..

ಹಿರಿಯರೆಲ್ಲರೂ ಆಟೋಟಗಳಲ್ಲಿ , ಸ್ಪರ್ಧೆಗಳಲ್ಲಿ ಭಾಗವಸಿದ್ದು ಮತ್ತೊಂದು ವಿಶೇಷವಾದ ಸಂಗತಿ, ಇದಲ್ಲದೆ ಮಹಿಳೆಯರ ಥ್ರೋ ಬಾಲ್ ಆಟವಂತೂ ಮನೋರಂಜಕವಾಗಿತ್ತು.

ದಾವನ ಪರಿವಾರದ ಮಹಿಳೆಯರು ಮತ್ತು ಪುರುಷರ ನೃತ್ಯವನ್ನು ನೋಡಿ ಪ್ರೇಕ್ಷಕರು ನಕ್ಕು ನಲಿದರು.

ಇದಾದ ನಂತರ ಬಹುಮಾನ ವಿತರಣೆ ಮತ್ತು ಭಾಗವಹಿಸಿದ ಎಲ್ಲಾ ಮಕ್ಕಳಿಗೂ ಕಿರು ಬಹುಮಾನವನ್ನು ಕೊಟ್ಟು



ದಿನದ ಕೊನೆಯಲ್ಲಿ ನಡೆದ "ಫ್ಲಾಶ್ ಮಾಬ್ " ಗಾನ-ನೃತ್ಯ ರಮಣೀಯವಾಗಿ ಮೂಡಿಬಂದಿತು. ಯುವಬೃಂದಾವನ ತಂಡದವರ ನೃತ್ಯ ಪ್ರದರ್ಶನ ಅಮೋಘವಾಗಿ ನಮ್ಮೆಲ್ಲರನ್ನೂ ತನ್ಮಯವಾಗಿಸಿತ್ತು.

ಪ್ರೋತ್ಸಾಹಿಸಿದ ಸೌರಭ ತಂಡಕ್ಕೆ ಪ್ರಶಂಸೆಗಳು ಸಲ್ಲಬೇಕು.

ಹೀಗೆಯೇ ಪ್ರತಿವರ್ಷವೂ ಬೃಂದಾವನವು ಬೆಳೆಯಲಿ, ಪಿಕ್ನಿಕ್ ಗಳು ಜರುಗಲಿ ಮತ್ತು ಅಭಿಮಾನವು ಅಕ್ಷಯವಾಗಲಿ ಎಂದು ಆಶಿಸೋಣವೇ?....

Picnic Photos Link

ಫೋಟೋ ಕೃಪೆ : ಗಿರೀಶ್ ಹೊಂಗಲ್






ಪ್ರವಾಸ

# ಅವರ್ಣನೀಯ, ಅವಿಸ್ಮರಣೀಯ, ಅಲಾಸ್ಕಾ



*ಅಜೇಯ ರಾವ್*





ಅಮೇರಿಕಾದಲ್ಲಿ ಬಂದು ನೆಲೆಸಿದಾಗಿನಿಂದಲೂ ನನ್ನ, ನನ್ನ ಪತ್ನಿಯ ಕನಸಿನ ಪಾತ್ರೆಯಲ್ಲಿದ್ದ (bucket list) ಪ್ರವಾಸ ತಾಣ ಅಲಾಸ್ಕ. ಮದುವೆಯ ದಶಮಾನೊತ್ಸವದ ಕಾರಣವೂ ಸೇರಿ ಈ ಬಾರಿ ಕನಸನ್ನು ನನಸು ಮಾಡಲೇ ಬೇಕೆಂದು ತೀರ್ಮಾನಿಸಿದೆವು. ಟ್ರಿಪ್ ಅನ್ನು ಬುಕ್ ಮಾಡಿಯೇ ಬಿಟ್ಟೆವು.

## ಪ್ರಯಾಣ ಹೇಗೆ:

ಅಲಾಸ್ಕ ಅಮೇರಿಕಾದ ಅತ್ಯಂತ ವಿಶಾಲವಾದ ರಾಜ್ಯ. ನ್ಯೂ ಜೆರ್ಸಿಯ ಎಪ್ಪತ್ತು ಪಟ್ಟು ದೊಡ್ಡದು. ಇಲ್ಲಿಯ ಹವಾಮಾನ, ಜನ ಜೀವನ, ಪ್ರಾಣಿ ಸಂಕುಲ, ನಿಸರ್ಗ ದೃಶ್ಯಾವಳಿಗಳು ಪ್ರತಿ ೧೦೦ ಮೈಲಿಗೂ ಬದಲಾಗುತ್ತವೆ. ಕೆಲ ಪ್ರವಾಸಿಗಳು ನೇರವಾಗಿ ಮಧ್ಯ ಅಲಾಸ್ಕಾದ ಆಂಖೊರೇಜ್ ನಲ್ಲಿಳಿದು, ಅಲಾಸ್ಕಾದ ಶೀತವಲಯದ ನಾಡಿನೊಳಗೆ ಚಾರಣ, ಪರ್ವತಾರೋಹಣ ಸಂಚರಿಸಿದರೆ, ಇನ್ನುಕೆಲವರು ಕ್ರೂಸ್ ಸಹಾಯದಿಂದ ದಕ್ಶಿಣ ಅಲಾಸ್ಕಾದ ಹಿಮನದಿಗಳನ್ನು, ಪ್ರಾಣಿ ಸಂಕುಲವನ್ನು ನೋಡಲಿಚ್ಚಿಸುತ್ತಾರೆ. ನಾವು ಎರಡನ್ನೂ ಮಾಡಬಯಸಿದ್ದರಿಂದ, ಕ್ರೂಸ್ ಹಾಗೂ ಲ್ಯಾಂಡ್ ಟ್ರಿಪ್ ಇರುವ ಒಂದು ಪ್ರಯಾಣ ಪಟ್ಟಿಯನ್ನು ಪ್ರಿನ್ಸೆಸ್ ಕ್ರೂಸ್ ನಲ್ಲಿ ಕೊಂಡೆವು.

ಇಲ್ಲಿಂದ ವ್ಯಾಂಕೋವರ್ ತಲುಪಿ ಕ್ರೂಸ್ ಹತ್ತಿದ ನಮಗೆ, ಕ್ರೂಸ್ ನ ಭರ್ಜರಿ ಔತಣ ಕಾದಿತ್ತು. ಅಲ್ಲಿ ಮೆನುವಿನಲ್ಲಿದ್ದ ಭಾರತೀಯ, ಸಸ್ಯಾಹಾರಿ ಊಟದ ಐಟಮ್ ಗಳಲ್ಲದೆ, ಅಲ್ಲಿನ ಮುಖ್ಯ ಶೆಫ಼ಗಳಲ್ಲಿ ಸಹ ಭಾರತೀಯರಿದ್ದ ಕಾರಣ ಊಟಕ್ಕೆ ಸಂಚಕಾರವಿರಲಿಲ್ಲ.

ನಮ್ಮ ೭ ದಿನಗಳ ಕ್ರೂಸ್ ವ್ಯಾಂಕೋವರ್ ನಿಂದ ಹೊರಟು, ದಿನವೂ ಅಲಾಸ್ಕಾದೊಂದು ಊರು, ಹಿಮನದಿಗಳಲ್ಲಿ ನಿಂತು ವಿಟ್ಟಿಯರ್ ಗೆ ಪ್ರಯಾಣಿಸಲಿತ್ತು.. ಮೊದಲ ದಿನ ನಮ್ಮ ಹಡಗು ಅಮೇರಿಕಾ, ಕೆನಡಾದ ನಡುಗಡ್ಡೆಗಳ ಅತಿಸುಂದರ ಸಾಗರದ ಕಂದರಗಳಲ್ಲಿ ಪ್ರಯಾಣಿಸಿ



ಅಲಾಸ್ಕಾವನ್ನು ಪ್ರವೇಶಿಸಿತು.

### ಕೇಚಿಕಾನ್

ನಮ್ಮ ಮೊದಲ ನಿಲುಗಡೆ ಕೇಚಿಕಾನ್(Ketchikan). ಕೇಚಿಕಾನ್ ಅಲಾಸ್ಕದ ದಕ್ಷಿಣದಲ್ಲಿರುವ ಪುಟ್ಟ ನಗರಗಳಲ್ಲೊಂದು. ಸಾಲ್ಮನ್ ಮೀನು ಹಿಡಿಯ ಬರುವ ಮೀನುಗಾರರಿಗೆ ಬೇಸಿಗೆಯ ತಾಣವಾಗಿದ್ದ ಈ ಊರು ಇಲ್ಲಿನ ಟೋಟೆಮ್ ಪೋಲ್ ಗಳಿಗೆ,ಸಾಲ್ಮನ್ ಮೀನುಗಳಿಗೆ ಅತಿಸಂದರವಾದ ಮಿಸ್ಟಿ ಫೊರ್ಡ್ ಕಾನನ ಕಂದರಗಳಿಗೆ ಪ್ರಸಿದ್ಧ.

ನಾವು ಬೆಳಿಗ್ಗೆ ಈ ಊರಿನ ಪಾರ್ಕ್ನಲ್ಲಿ **ಟೋಟೆಮ್ ಪೋಲ್** ಗಳನ್ನು ನೋಡಿದೆವು . ಅಲಾಸ್ಕ, ಉತ್ತರ ಕೆನಡಾದ ಮೂಲ ಜನರಲ್ಲಿ ಟೋಟೆಮ್ ಪೋಲ್ ಪ್ರಸಿದ್ಧಿ. ಪುರಾಣ, ಪ್ರಸಿದ್ದ ಜನರ ಕಥೆಗಳ ನಿರೂಪಿಸುವ ಈ ಪೋಲ್ ಗಳಲ್ಲಿ ಹಲವನ್ನು ಶುಭ ಸೂಚಕವೆನ್ನುತ್ತಾರೆ. ವಿಶ್ವದಲ್ಲೇ ಅತಿಹೆಚ್ಚು ಪೋಲ್ ಗಳು ಇಲ್ಲಿ ಕಾಣಸಿಗುತ್ತವೆ.

**ಮಿಶ್ಟಿ ಫೋರ್ಡ್** (fjord= ಸಾಗರದ ಕಾಲುವೆ) ಪ್ರಾಣಿ ಪಕ್ಶಿಗಳಿಂದ ಕೂಡಿದ ಅತ್ಯಂತ ರಮಣೀಯ ಜಾಗ..ಇಲ್ಲಿಗೆ  ಬೋಟ್ ಅಥವಾ ವಿಮಾನದಲ್ಲಷ್ಟೇ ಹೋಗಲು ಸಾಧ್ಯ. ಇಲ್ಲಿನ ಸೌಂದರ್ಯ ಅವರ್ಣನೀಯ. ನಾವು ಇಲ್ಲಿ ಹದ್ದು, ಸಾಲ್ಮನ್ ಇನ್ನಿತರ ಪ್ರಾಣಿಗಳನ್ನು ನೋಡಿದೆವು.ಕರಡಿಗಳು

ಕೇಚಿಕಾನ್ ನಿಂದ ಹೊರಟ ನಮ್ಮ ಹಡಗು ರಾತ್ರೋರಾತ್ರಿ ಜುನಾಉ ಗೆ ಪ್ರಯಾಣ ಬೆಳೆಸಿತು.

### ಜುನಾಉ

ಜುನಾಉ ಅಲಾಸ್ಕಾದ ರಾಜಧಾನಿ. ಅಲಾಸ್ಕಾ ಚಿನ್ನದ ಬೇಟೆಯ ಸಮಯದಲ್ಲಿ ಪ್ರಸಿದ್ಧವಾದ ಈ ನಗರಕ್ಕೆ ಹಡಗು, ವಿಮಾನ ಲ್ಲಷ್ಟೇ ಬರಲು ಸಾಧ್ಯ. ಬೆಳಿಗ್ಗೆ ನಾವು ಮೌಂಟ್ ರಾಬರ್ಟ್ಸ್ ಟ್ರಾಂ ವೇ ನಲ್ಲಿ ಮೌಂಟ್ ರಾಬರ್ಟ್ಸ್ ಪರ್ವತ ತಲುಪಿದ ನಾವು ಅಲ್ಲಿಂದ ೫-೭ ಮೈಲಿ ದೂರದ ಚಾರಣ ಕೈಗೊಂಡೆವು.. ಅಲ್ಲಿನ ದೃಶ್ಯಗಳು ಬಹು ಸುಂದರ.









ಮಾರ್ಮೊಟ್, ಜಿಂಕೆ, ಕಡವೆ, ಮುಳ್ಳು ಹಂದಿಗಳ ನೋಡಿದ ನಾವು , ಬೆಳೆಸಿತ್ತು ಊಟ ಮಾಡಿ ತಿಮಿಂಗಿಲಗಳ ನೋಡ ಹೊರಟೆವು.

ಹಂಪ್ ಬ್ಯಾಕ್, ಆರ್ಕಾ ತಿಮಿಂಗಿಲಗಳಲ್ಲದೆ ಥಾಲ್ ಪಾರ್ಪೊಇಸ್,ಸೀಲ್ ಗಳನ್ನು ಇಲ್ಲಿ ನಾವು ನೋಡಿದೆವು

ಅಲ್ಲಿಂದ ನಾವು ಮೆಂಡ್ ಹಾಲ್ ಗ್ಲೇಸಿಯರ್(ಹಿಮನದಿ)ಗೆ ಪ್ರಯಾಣ ಬೆಳೆಸಿದೆವು. ಅಲ್ಲಿನ ನಗ್ಗೆಟ್ ಜಲಪಾತಕ್ಕೆ ಮಳೆಯಲ್ಲೂ ಹೈಕ್ ಮಾಡಿದ ನಮಗೆ ಒಂದೆಡೆ ಹಿಮನದಿ, ಇನ್ನೊಂದೆಡೆ .ಜಲಪಾತ, ಇವೆರಡರ ಸಂಗಮದಲ್ಲಿ ಸಮಯ ಹೋದದ್ದೆ ತಿಳಿಯಲಿಲ್ಲ,

ಹಡಗಿಗೆ ವಾಪಸ್ ಬರುವ ಬಸ್ ತಪ್ಪಿಸಿಕೊಂಡೆವಾದರೂ, ಅಲ್ಲಿಯ ಪಾರ್ಕ್ ರೇಂಜರ್ ಇನ್ಯಾವುದೋ ಬಸ್ ಗೆ ನಮ್ಮನ್ನು ಹತ್ತಿಸಿ ಸಹಾಯ ಮಾಡಿದರು. ಹೇಗೋ ತಲುಪಿದ ನಮಗೆ ರುಚಿಯಾದ ಅದ್ದೂರಿ ಭೋಜನ ಕಾದಿತ್ತು. ಹಡಗು ಮುಂದಿನ ಊರಿಗೆ ರಾತ್ರೋರಾತ್ರಿ ಪ್ರಯಾಣ

## ಸ್ಕಾಗ್ ವೇ:

ಸ್ಕಾಗ್ ವೇ ದಕ್ಷಿಣ ಅಲಾಸ್ಕದ ಚಿನ್ನದ ಬೇಟೆಯಲ್ಲಿ ಹುಟ್ಟಿದ ಒಂದು ಚಿಕ್ಕ ಊರು. ಅಲ್ಲಿಂದ ನಾವು ಕೆನಡಾದ ಯುಕಾನ್ ಪ್ರಾಂತ್ಯಕ್ಕೆ ಇಡೀ ದಿನದ ಪ್ರಯಾಣ ಬೆಳೆಸಿದೆವು.. ಅತ್ಯಂತ ಅಕಲ್ಪಿಶಿತ , ಅಪ್ರತಿಮ ನಿಸರ್ಗ ನಿಮಗೆ ಸಿಗುವುದು ಇಲ್ಲೇ.. ಹಿಮಾಚ್ಛಾದಿತ ಶಿಖರಗಳು, ಕಡಿದಾದ ಹೆದ್ದಾರಿಗಳು, ಕಣಿವೆಗಳು, ಸರೋವರಗಳು ಕೈಲಾಸ ಪರ್ವತ ಪ್ರವಾಸದ ನೆನಪಿಸುತ್ತಿದ್ದವು. ಯುಕೊನ್ ನಲ್ಲಿ ಹಸ್ಕಿ ನಾಯಿಗಳ ತರಬೇತಿ ಕೇಂದ್ರಕ್ಕೆ ಭೇಟಿ ಕೊಟ್ಟ ನಾವು ನಾಯಿಗಳನ್ನು ಮುದ್ದಿಸಿದೆವು, ಅಲ್ಲಿನ ಶೀತಲ ಮರಳುಘಾದಿನಲ್ಲಿ, ಹರಿದ್ವರ್ಣ ಸರೋವರದಲ್ಲಿ ಅಡ್ಡಾಡಿದೆವು



ವಾಪಸ್ ತಲುಪಿದ ನಾವು ಸ್ಕಾಗ್ ವೇ ನಗರದಲ್ಲಿ ಓಡಾಡಿದೆವು.. ಸುಮಾರು ೧೦೦೦ ಜನ ವಾಸವಿರುವ ಈ ಊರಿಗೆ, ಬೇಸಿಗೆಯಲ್ಲಿ ೪೦೦೦ ಕ್ಕೂ ಹೆಚ್ಚು ಜನ ಕೆಲಸಕ್ಕಾಗಿ ಬರುತ್ತಾರೆ .

ಮುಂದೆರಡು ದಿನ ನಮ್ಮ ಪ್ರಯಾಣ ಸ್ವರ್ಗಕ್ಕೇ.. ಸ್ಕಾಗ್ವೇ ಇಂದ ಅಂಖೊರೇಜ್ ವರೆಗಿನ ದಾರಿಯಲ್ಲಿ ವಿಶ್ವದಲ್ಲೇ ಅತಿ ಹೆಚ್ಚು ಹಾಗೂ ಅತಿಸುಂದರ ಹಿಮ ನದಿಗಳು ಕಾಣಸಿಗುತ್ತವೆ. ನಮ್ಮ ಹಡಗು ಮೊದಲ ದಿನ ಗ್ಲೇಸಿಯರ್ ಬೇ ರಾಷ್ಟ್ರೀಯ ಪಾರ್ಕ್ ಗೆ ಮುನ್ನಡೆಯಿತು..

ಮಾನವರು ಅಷ್ಟಾಗಿ ಕಾಲಿಡದ ಈ ಪಾರ್ಕ್ ವಿಶ್ವದಲ್ಲೇ ದೊಡ್ಡ ಕಾದಿರಿಸಿದ ಪ್ರದೇಶಗಳಲ್ಲೊಂದು.

ಕಣಿವೆಗಳೋ, ಕಾಲುವೆಗಳೋ, ಝರಿಗಳೋ, ಹಿಮನದಿಗಳೊ, ಹಿಮಾಚ್ಛಾದಿತ ಶಿಖರಗಳೊ, ಪ್ರಾಣಿ ಪಕ್ಶಿಗಳೊ.. ನಿಸರ್ಗವೇ ಸ್ವರ್ಗ ಎನ್ನಬಹುದಾದ ಈ ಜಾಗಗಳಲ್ಲಿ ನಮ್ಮ ಹಡಗು ಎರಡು ದಿನ ಸಂಚರಿಸಿತು.. ಹಬ್ಬಾರ್ಡ್ ಗ್ಲೇಸಿಯರ್, ಗ್ಲೇಸಿಯರ್ ಬೇ ರಾಷ್ಟ್ರೀಯ ಪಾರ್ಕ್ ಪ್ರಿನ್ಸ್ ವಿಲಿಯಮ್ ಸೌನ್ಡ್ ನ ಹಲವಾರು ಗ್ಲೇಸಿಯರ್ಗಳ ಅಂದ ನೋಡುತ್ತಾ ಭೂಮಿ ತಾಯಿಯ ವೈವಿಧ್ಯ ಮೆರುಗುಗಳ ಅರಿವಾಯಿತು.. ಈ ಬಾರಿ ಹಿಂದಿನ ಎಲ್ಲ ವರುಷಗಳಿಗೂ ಮೀರಿ ಹಿಮನದಿಗಳು ಕರಗುವುತ್ತಿರುವದನ್ನು ಕಣ್ಣಾರೆ ಕಂಡು, ಪಾರ್ಕ್ ರೇಂಜರ್ಗಳಿಂದ ಕೇಳಿ ದು:ಖವೂ ಆಯಿತು.

ಹೀಗೆಯೇ, ನಾಕದಾರಿಯಲ್ಲಿ ೭ ದಿನ ಸಾಗಿದ ನಮ್ಮ ಹಡಗು ವ್ಹಿಟ್ಟಿಯರ್ ಬಂದು ತಲುಪಿತು.

ವ್ಹಿಟ್ಟಿಯರ್ ನಿಂದ ಅಲಾಸ್ಕಾ ಒಳ ಭೂ ಭಾಗಗಳ ಪ್ರವಾಸ ಆರಂಭ. ವ್ಹಿಟ್ಟಿಯರ್ನಲ್ಲಿ ನಮಗಾಗಿ ಡೆನಾಲಿಗೆ ಹೊರಡುವ ಬಸ್ ಕಾಯುತ್ತಿತ್ತು. ೮ ಗಂಟೆಗಳ ನಮ್ಮೀ ಪ್ರಯಾಣ ವಿಹಂಗಮ ದೃ₹ಹ್ಯಗಳನ್ನೊಳಗೊಂಡ ಪಾರ್ಕ್ಸ್ ಹೈವೇ ನಲ್ಲಿ. ದಾರಿಯಲ್ಲಿ ಪ್ರಿನ್ಸೆಸ್ ನ್ ಇನ್ನೊಂದು ರೆಸಾರ್ಟ್ ನಲ್ಲಿ ನಮಗಾಗಿ ಊಟ ಏರ್ಪಡಿಸಿದ್ದರು. 6 ಮಿಲಿಯನ್ ಎಕರೆಗಳ ಡೆನಾಲಿ ರಾಷ್ಟ್ರೀಯ ಪಾರ್ಕ್ ಹಲವಾರು ಪ್ರಾಣಿ ಪಕ್ಷಿಗಳಿಗೆ ಆಶ್ರಯ ತಾಣ

ಡೆನಾಲಿ ತಲುಪಿದ ನಾವು ೪ ಜನ ಕೂರುವ ವಿಮಾನದಲ್ಲಿ ಡೆನಾಲಿ






ಶಿಖರದ ಪರಿವೀಕ್ಷಣೆ ಮಾಡಿದೆವು.. ಸಮುದ್ರಮಟ್ಟದಿಂದ ೨೦೦೦೦ ಅಡಿ ಎತ್ತರದ ಈ ಶಿಖರ ರುದ್ರ ರಮಣೀಯ. ಶಿಖರದ ಅರ್ಧ ಮೈಲಿಯ ದೂರದಲ್ಲಿ ಸುತ್ತುಬರುವ ಈ ವಿಮಾನ ಪ್ರಯಾಣ ನವಿರೇಳಿಸಿತು. ಬರುವಾಗ ನಮಗೆ ಡಾಲ್ ಕುರಿಗಳು, ಮೂಸ್, ಕರಡಿಗಳೂ ಕಾಣಸಿಕ್ಕವು



ಮರುದಿನ ನಾವೆಲ್ಲರೂ ದೆನಾಲಿ ಪಾರ್ಕ್ನಲ್ಲಿ ಹೈಕಿಂಗ್ ಹೊರಟೆವು.. ಟಂಡ್ರಾ ಕಾಡಿನ ಬದಲಾವಣೆಗಳೂ,ಲವಾರು ಪ್ರಾಣಿ ಪಕ್ಶಿಗಳೂ, ನದಿ ಕೆರೆಗಳು, ಅಲಾಸ್ಕಾದ ಕಾಡಿನ ಯ್ರಾಸ್ಪ್ ಬೆರ್ರಿಗಳೂ ನಮ್ಮ ಕಾಲ್ನಡಿಗೆ ಸವೆದದ್ದೇ ತಿಳಿಯದಂತೆ ಮಾಡಿದ್ದವು. ನನ್ನ ಆರು ವರುಷದ ಮಗನೂ ೧೩-೧೪ ಮೈಲಿ ನಡೆದದ್ದು ಅತಿ ವಿಶೇಷವಾಗಿತ್ತು



ಮರುದಿನ ಡೆನಾಲಿ ಯ ದಕ್ಷಿನ ಭಾಗದ ರೆಸಾರ್ಟ್ ಬಂದ ನಮಗೆ ರೆಸಾರ್ಟ್ನಿಂದಲೇ ಡೆನಾಲಿಯ ಶಿಖರ ಕಾಣುತಿತ್ತು. ಯ್ರಾಫ಼್ಟಿಂಗ್ ಮತ್ತು ಇನ್ನಷ್ಟು ಚಾರಣದಲ್ಲಿ ದಿನ ಗಳೆದ ನಾವು ಮಧ್ಯ ರಾತ್ರಿಯಲ್ಲೂ ದಿನಬೆಳಕಿದ್ದರಿಂದ ತಿರುಗಾಡಿ ತಿಂದೆವು.



ಆಂಖೊರೇಜ್ಗೆ ನಮ್ಮ ಮರುಪ್ರಯಾಣ ಅತಿಸುಂದರ ಪ್ರದೇಶದಲ್ಲಿ ಸಾಗುವ ಪಾರದರ್ಶಕ ಗೈಡೆಡ್ ರೈಲಿನಲ್ಲಿ . ಇನ್ನಷ್ಟು ಪ್ರಾಣಿ ಪಕ್ಷಿಗಳ ನೋಡುತ್ತಾ ಆಂಖೊರೇಜ್ ತಲುಪಿದೆವು.



ಆಂಖೊರೇಜ್ ನಲ್ಲಿ ಊರು, ಮೃಗಾಲಯ, ಬೀಚ್ ಸುತ್ತಿದ ನಮಗೆ ಸಂಜೆ ನೆವಾರ್ಕ್ ವಿಮಾನ ಕಾಯುತ್ತಿತ್ತು. ತಂಪಾದ ಮನಸ್ಸು ಭಾರವಾದ ಹೃದಯದೊಂದಿಗೆ ಅಲಾಸ್ಕ ಕ್ಕೆ ವಿದಾಯ ಹೇಳಿದೆವು

# ಜೈ(ಕು)-ತಂತ್ರ ರಾಜಕೀಯ!!!



ಶ್ರೀವತ್ಸ ಕುಲಕರ್ಣಿ



ಮತ ಹಾಕಿ ನಾವ್ ಕೆಟ್ವಿ,
ಅಯ್ಯಯ್ಯೋ... ಬಹುಮತ ಕೇಳಿ ನೀವೂ ಕೆಟ್ರಿ..
ಜೈ ಕು-ತಂತ್ರ ರಾಜಕೀಯ!!!

ನಮಗ್ಯಾಕ್ರೀ ಬೇಕಿತ್ತು, ಇವರಂಥಾ  ನಾಯಕರು,
ಅವರವರ ಜೇಬ್ ತುಂಬಿಸೋ, ಬುದ್ಧೀನ ಹೊತ್ತವರು,

ಜನರಂದ್ರೆ ಇವರಿಗಿಲ್ಲ ಒಂದ್ಚೂರು, ಕಿಮ್ಮತ್ತು,
ಇಂತೋರ್ನ ನಂಬ್ಕೊಂಡು, ಓಟ್ ಹಾಕ್ಬಾರ್ದಾಗಿತ್ತು...

ಕುರ್ಚಿಗೋಸ್ಕರ ನಮ್ಮಲ್ಲೇ, ದ್ವೇಷ ಹುಟ್ಸಿಸೋ ಈ ಮಂದಿ,
ಮಾಡ್ತಾರಾ ಒಳ್ಳೇ ಕೆಲ್ಸ ನಮಗೋಸ್ಕರ, ಜಗಕಂಜಿ,
ರಾಜಕಾರಣಕ್ ಬೇಡವಂತೆ, ಯಾವ್ ಡಿಗ್ರೀ-ಸರ್ಟಿಫಿಕೇಟು,
ಇವ್ರು ಮಂತ್ರಿಯಾಗ್ಲಿಕ್ ಸಾಕಂತೆ, ಮನೆಯವ್ರು ಕೊಡೋ ಟಿಕೇಟು...

ದೇಶ ಕಾಯೋ ಸೈನಿಕರಿಗೂ, ಕೊಡ್ಲಿಲ್ಲ ಇವ್ರು ಮರ್ಯಾದೆ,
ವಿದೇಶಕ್ ಹೋಗ್ಬರೋ ಅಷ್ಟ್ರಲ್ ತೆಗೆದಿಟ್ಟಿದ್ರು ಇವ್ರಿಗೊಂದ್ ತಗಾದೆ,
ಇವ್ರನ್ನೇ ಬಿಟ್ಕೋದ್ರು, ಇವರ್ ನಂಬಿದ್ ಭಂಟ್ರು,
ಅವ್ರನ್ನೆಲ್ಲಾ ಗುಡ್ಡೇ ಹಾಕ್ಲಿಕ್, ಹೋದಾ ಒಬ್ಬ ಪಂಟ್ರು (ರೌಡಿ ಶೀಟರ್)...

ಭಂಟ್ರೆಲ್ಲಾ ಒಟ್ಟಾಗ್ ಸೇರಿ, ಮಾಡಕ್ ಹೊಂಟ್ರು ಒಂದ್ ತಂತ್ರ,
ಅಪ್ಪ-ಮಕ್ಳು ಸೇರ್ಕೊಂಡು, ಹಾಕ್ತಾ ಕುಂತ್ರು ಒಂದ್ ಮಂತ್ರ,
ಮಂತ್ರದ್ ಜೊತೆ, ನಿಂಬೆ ಹಿಡ್ಕೊಂಡ್ ಹೊಂಟ ಒಬ್ಬ ಮಂತ್ರಿ,
ಅವನ್ ಹಿಂದೇನೆ, ನಾವು ಬರ್ತೀವ್ ಅಂತಿನ್ನಿಬ್ರು ಹೊರ್ಟ್ರು ಜಗತ್ ಕಂತ್ರಿ...

ಭಂಟ್ರ ಮನ್ಸು ಒಪ್ಪಲೇ ಇಲ್ಲ, ಇವರ್ ಮಂತ್ರ-ತಂತ್ರಕ್ಕೆಲ್ಲಾ,
ಈ ಸಮಯಕ್ಕೋಸ್ಕರ ಕಾದ್-ಕುಂತಿದ್ರು ಯೆಡ್ಡೀ ಬಳಗ ಎಲ್ಲಾ,
ಬಂದೇಬಿಡ್ತು, ಬಹುಮತ ಬೇಡ್ಕೊಂಡ್ ಯೋಗ್ಯತೆ ಅಳ್ಕೊಳೋ ಸಮಯ,
ಬಹುಮತ ಕೇಳೋ ನೆಪಾ ಹೇಳ್ಕೊಂಡ್, ಮಾಡ್ತಾ ಕುಂತ್ರು ಎಲ್ಲರ್ ಕಾಲವ್ಯಯ...

ಪಾಪದ್ ಕೊಡ ತುಂಬುದ್ ಮೇಲೆ, ಹೆಚ್ಚಿಗೆ ಕಾಲ ಸಿಗೋದಿಲ್ಲ,
ಹಾಗೆ ಆಯ್ತು ಇವ್ರ ಕಥೇಲು, ಬಹುಮತದಲ್ ಯಾರೂ ಇವರ್ ಕಡೆ ಬರ್ಲೆ ಇಲ್ಲ,



# ಹೀಗೆ ಬದುಕಲು ಕಲಿಯೋಣವೇ?



ಜ್ಯೋತಿ ಫಾಟಕ್

ಜಾನಕಮ್ಮ ಮೊನ್ನೆ ಅವಳ ಹಳೆಯ ಗೆಳತಿ ರತ್ನಕ್ಕನನ್ನು ನೋಡಲು ಅವಳ ಪುಟ್ಟ ಹಳ್ಳಿಗೆ ಹೋಗಿದ್ದಳು:

“ಅಯ್ಯೋ ರತ್ನಕ್ಕ ಈ ಊರಲ್ಲಿ ಹೇಗಿರುತ್ತೀರಿ? ಇಲ್ಲಿ ನಿಮಗೆ ನೀರಸ ಎನ್ನಿಸುವುದಿಲ್ಲವೇ? ಎಂದು ಪಟ್ಟಣದ ಜಾನಕಮ್ಮ , ಹಳ್ಳಿಯಲ್ಲಿರುವ ರತ್ನಕ್ಕನಿಗೆ ಕೇಳಿದಳು.

"ನೀರಸ ಎಂದರೇನು ಜಾನಕಮ್ಮ? " ರತ್ನಕ್ಕ ಕೇಳಿದಳು.

ಜಾನಕಮ್ಮ - "ಈ ಹಳ್ಳಿಯಲ್ಲಿ ಜೀವನ ಜಿಗುಪ್ಸೆ ಬರುವುದಿಲ್ಲವೆ? "

ರತ್ನಕ್ಕ "ಇಲ್ಲವಲ್ಲ. ಯಾಕೀ ಯೋಚನೆ ಬಂತು ನಿಮಗೆ?".
ಜಾನಕಮ್ಮ ಹೇಳಿದಳು, " ಪೇಟೆಯಲ್ಲಾದರೆ ಅಕ್ಕಪಕ್ಕದವರ ಜೊತೆ ಮಾತನಾಡಬಹುದು, ಪಾರ್ಕ್ ಗೆ ವಾಕಿಂಗ್ ಹೋಗಬಹುದು, ಬಿಡುವಿನ ವೇಳೆಯಲ್ಲಿ ಕಿಟ್ಟಿ ಪಾರ್ಟಿ, ಸಿನೆಮಾ, ಮಾಲ್ ಅಂತೆಲ್ಲ ಸುತ್ತಬಹುದು. ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಹೋಗಬಹುದು. ಒಂದಾ ಎರಡಾ, ಹೇಳಲು ಹೊರಟರೆ ಪಟ್ಟಿ ಮುಗಿಯಲ್ಲ ರತ್ನಕ್ಕ. "

ರತ್ನಕ್ಕ , "ಜಾನಕಮ್ಮ, ನಿಮ್ಮ ಪಟ್ಟಿಯಲ್ಲಿ, ಹವ್ಯಾಸಗಳಿಗೆ ಜಾಗವಿದೆಯೇ? "
ಜಾನಕಮ್ಮ, " ಖಂಡಿತ ಇದೆ, ಆದರೆ ನಿಮಗೆ ಹಳ್ಳಿಯಲ್ಲಿ ಇದೆಲ್ಲ ಮಾಡಲು ಅವಕಾಶ ಎಲ್ಲಿ ಅದಕ್ಕೇ ನಾನು ಹೇಳಲಿಲ್ಲ?" ಎಂದು ನಕ್ಕಳು.

ರತ್ನಕ್ಕ ಕೇಳಿದಳು, " ನೀವು ಎಷ್ಟು ಕಿಟ್ಟಿ ಪಾರ್ಟಿಗಳಲ್ಲಿದ್ದೀರಿ?
ಜಾನಕಮ್ಮ, "ಅಯ್ಯೋ ನಾನು ಯಾವ ಪಾರ್ಟಿಯಲ್ಲೂ ಇಲ್ಲರಿ. ಅವರ ಜೊತೆಗೆಲ್ಲ ನನಗೆ ಸರಿ ಹೋಗಲ್ಲ."

ರತ್ನಕ್ಕ, " ಹಾಗಾದರೆ ನಿಮ್ಮದು ಭಾರೀ ವಾಕಿಂಗ್ ಇರಬಹುದು".
ಜಾನಕಮ್ಮ, "ಅಯ್ಯೋ ಮನೆಯ ಮುಂದೆನೇ ಪಾರ್ಕ್ ಇದೆ .
ಒಂದೆರಡು ದಿನ ಹೋದೆ, ಆಮೇಲೆ ಬೋರು ರೀ"

ರತ್ನಕ್ಕ, " ಓಹೊ! ಮತ್ತೇನು, ಸಿನೆಮಾ, ಮಾಲ್ ಅಂತೆಲ್ಲ ಸುತ್ತುತ್ತಿರುತ್ತೀರ?"
ಜಾನಕಮ್ಮ, " ಅದೆಲ್ಲ ನನಗೆ ಇಂಟ್ರೆಸ್ಟ್ ಇಲ್ಲಾರೀ, ಟೈಮ್ ವೇಷ್ಟ್ ನೋಡಿ, ಅದಕ್ಕಿಂತ ಹಾಯಾಗಿ ಮನೆಲ್ಲೇ ಕೂತು ಟೀವಿ ನೋಡಬಹುದು"

ರತ್ನಕ್ಕ, " ಹೌದಾ! ಹಾಗಾದರೆ ಬರೀ ನಾಟಕ, ಸಾಂಸ್ಕೃತಿಕ ಕಾರ್ಯಕ್ರಮ ನೋಡುತ್ತೀರೇನೊ?"
ಜಾನಕಮ್ಮ, " ಮಕ್ಕಳನ್ನು ನೋಡಿ ಕೊಳ್ಳುವುದು, ಅಡಿಗೆ, ಮನೆ ಕೆಲಸ ಇದರ ಮಧ್ಯೆ ಎಲ್ಲಿ ಹೋಗೊದು ಹೇಳಿ?"

ರತ್ನಕ್ಕ, " ಅಯ್ಯೊ! ಹವ್ಯಾಸಗಳಿಗೂ ಟೈಮ್ ಇಲ್ವೆ?"
ಜಾನಕಮ್ಮ, " ಇಲ್ಲ ನೋಡಿ".

ರತ್ನಕ್ಕ, " ಹಾಗಾದರೆ ನೀವು ಪೇಟೆಯಲ್ಲಿದ್ದು ಬೂಸು" ಎಂದು ನಕ್ಕಳು.
ಅದಕ್ಕೆ ಜಾನಕಮ್ಮ "ಆದರೂ ಹಳ್ಳಿ ಬೋರು ರೀ. ಹೇಗೆ ಹೊತ್ತು ಕಳೀತೀರೊ?"

ರತ್ನಕ್ಕ, " ಜಾನಕಮ್ಮ, ಹೊತ್ತು ಕಳೆಯಲು ಹೊತ್ತು ಸಿಕ್ಕರೆ ತಾನೆ?".
ಜಾನಕಮ್ಮ ಆಶ್ಚರ್ಯದಿಂದ, " ಹೊತ್ತು ಸಿಗುವುದಿಲ್ಲವೇ?" ಎಂದು ಕೇಳಿದಳು.

ರತ್ನಕ್ಕ, " ನೊಡಿ ಜಾನಕಮ್ಮ, ಮನೆ ಕೆಲಸ, ಮಕ್ಕಳನ್ನು ನೋಡಿಕೊಳ್ಳುವುದು, ಅಡಿಗೆ ಇವೆಲ್ಲ ಒಂದು ದಿನಚರಿ ಅಷ್ಟೆ. ಇದರ ಹೊರತಾಗಿ ನಾವು ಏನು ಉಪಯುಕ್ತವಾದ ಕೆಲಸ ಮಾಡುತ್ತೇವೆ? ಎಂದು ನಾನು ಯೋಚಿಸುತ್ತೇನೆ. ನಮ್ಮ ಮನೆ ಪೇಟೆಯ ಮನೆಯಷ್ಟು ದೊಡ್ಡದು ಹಾಗೂ ಅನುಕೂಲಕರ ಇಲ್ಲದಿರಬಹುದು. ಅದರೆ, ಈ ನನ್ನ ಪುಟ್ಟ ಮನೆಯಲ್ಲಿ, ನಾನು ಪ್ರತಿ ದಿನ, ೪ ಮಕ್ಕಳಿಗೆ ಸಂಗೀತ ಪಾಠ ಹೇಳಿ ಕೊಡುತ್ತೇನೆ. ಬಿಡುವು ಮಾಡಿಕೊಂಡು, ಹೊಲಿಗೆ ಕಲಿಯಲು ಹೋಗುತ್ತೇನೆ. ಪುಟ್ಟ ಪುಟ್ಟ ಕವನ, ಕಥೆಗಳನ್ನು ಬರೆಯುತ್ತೇನೆ. ಇವೆಲ್ಲ ನನ್ನ ಹವ್ಯಾಸ ಗಳು.

ಇನ್ನು, ನಮ್ಮನೆಯ ಹಿಂದೆ ಇರುವ ಗುಡ್ಡವನ್ನು, ದಿನಕ್ಕೊಂದು ಬಾರಿ ಹತ್ತಿ ಇಳಿಯುತ್ತೇನೆ. ಇದು ನನ್ನ "ವಾಕಿಂಗ್"
ನಮ್ಮ ಮನೆಯ ಹತ್ತಿರದ ಪುಟ್ಟ ಸರಕಾರಿ ಶಾಲೆಗೆ ವಾರಕ್ಕೆರಡು ಬಾರಿ ಹೋಗಿ (ಉಚಿತವಾಗಿ) ಮಕ್ಕಳಿಗೆ ಭಜನೆ , ಪ್ರಾಣಾಯಾಮ, ನೀತಿ ಕತೆಗಳನ್ನು ಹೇಳಿಕೊಡುತ್ತೇನೆ. ಇದೇ ನನ್ನ "ಕಿಟ್ಟಿ ಪಾರ್ಟಿ, ಸಿನೆಮಾ" ಎಲ್ಲ.

ಪ್ರತೀ ಮಂಗಳವಾರ ನಾನು, ಮಕ್ಕಳು, ಜಾತ್ರೆಗೆ ಹೋಗಿ, ಇಡೀ ವಾರದ ಸಾಮಾನು, ತರಕಾರಿ ಖರೀದಿ ಮಾಡಿ, ಹೊಟೇಲ್ ನಲ್ಲಿ ತಿಂದು ಬರುತ್ತೇವೆ. ಇದೇ ನನ್ನ "ಮಾಲ್".

ನಾನು ಈ ಎಲ್ಲಾ ಕೆಲಸಗಳನ್ನು ಮುಗಿಸುವಷ್ಟರಲ್ಲಿ, ಗಂಟೆಗಳು, ದಿನಗಳು, ವಾರಗಳು ಕಳೆಯುವುದೇ ಗೊತ್ತಾಗುವುದಿಲ್ಲ. ನಾನು ಮಾಡುವ ಕೆಲಸದಲ್ಲಿಯೇ ಉಪಯುಕ್ತತೆ, ಸಂತೋಷ, ನೆಮ್ಮದಿ ಆತ್ಮ ತೃಪ್ತಿ ಎಲ್ಲವನ್ನೂ ನೋಡುತ್ತೇನೆ ಜಾನಕಮ್ಮ. ಬೋರಿಂಗ್, ನೀರಸ, ಜಿಗುಪ್ಸೆ ಅನ್ನುವ ಪದಗಳ ಅರ್ಥವೇ ಗೊತ್ತಿಲ್ಲ ನನಗೆ".

ಜಾನಕಮ್ಮನಿಗೆ ಮಾತೇ ಹೊರಡಲಿಲ್ಲ. ಮೌನವಾಗಿ ಬಿಟ್ಟಳು.

"ನಾವು ಎಲ್ಲಿ ಇರುತ್ತೇವೆ ಅನ್ನುವುದು ನಮ್ಮ ಕೈಯಲ್ಲಿಲ್ಲ ಜಾನಕಮ್ಮ. ಮಣ್ಣು ಹಾಗೂ ನೀರಿನ ಋಣ ದೇವರು ಬರೆದದ್ದು. ಆದರೆ ನಮ್ಮ ದಿನಚರಿ ಬರೆಯುವ ಪೂರ್ತಿ ನಿಯಂತ್ರಣ ನಮ್ಮ ಕೈಯಲ್ಲಿದೆ. ನಮ್ಮ ಜೀವನದ ಗುಣಮಟ್ಟವನ್ನು ಕಾಪಾಡುವುದು.(lead a quality life) ಹೇಗೆ ಅನ್ನುವುದರ ಅರಿವಿದ್ದರೆ ಸಾಕು."

ಎಂದು ಹೇಳಿ ರತ್ನಕ್ಕ," ಬನ್ನಿ ಊಟ ಮಾಡೋಣ" ಎಂದು ಮುಗುಳು ನಗುತ್ತಾ ಅಡಿಗೆ ಮನೆಗೆ ಹೋದಳು.

# ಶ್ರೀ ವ್ಯಾಸರಾಜರ ಬೃಂದಾವನ - ಪುನರ್ನಿರ್ಮಾಣ



*ರಾಘವೇಂದ್ರ ಕುಂದಲಕುರ್ಕಿ*

July 17 2019 ರಂದು ಕರ್ನಾಟಕದ ಇತಿಹಾಸದಲ್ಲಿ ನಡೆದ ಒಂದು ದುರ್ಘಟನೆ, ಹಲವಾರು ಇತಿಹಾಸಕಾರರಿಗೆ, ಶ್ರೀ ವ್ಯಾಸರಾಜ ಭಕ್ತರಿಗೆ, ಕರ್ನಾಟಕದ ಹೆಮ್ಮೆಯ ಪರಂಪರೆಯನ್ನು ಗೌರವಿಸುವ ಎಲ್ಲ ಜನರಿಗೂ ಆಘಾತ ವನ್ನುಂಟು ಮಾಡುವ ಘಟನೆ. "ನವ ವೃಂದಾವನ"ದಲ್ಲಿರುವ ಶ್ರೀ ವ್ಯಾಸರಾಜರ ಬೃಂದಾವನವನ್ನು ಕೆಲವು ಕಿಡಿ ಗೇಡಿಗಳು ಸಂಪೂರ್ಣ ಕೆಡವಿ ಹಾಕಿದ್ದರು. ಇದು 500



ವರ್ಷಗಳ ಇತಿಹಾಸವಿರುವ ಶ್ರೀ ವಿಜಯನಗರ ಸಾಮ್ರಾಜ್ಯದ ಕುರುಹು ಆಗಿರುವ, ಶ್ರೀಕೃಷ್ಣದೇವರಾಯನ ಆಸ್ಥಾನದಲ್ಲಿ ರಾಜ ಗುರುಗಳಾದಂತಹ ಶ್ರೀ ವ್ಯಾಸರಾಜರ ಬೃಂದಾವನ.

**ಸ್ಥಳ ವಿಷಯ**: ಹಂಪೆಯ ಹತ್ತಿರವಿರುವ ಆನೆಗುಂದಿ ಗ್ರಾಮದಲ್ಲಿ ತುಂಗಾನದಿಯು ಭೋರ್ಘರೆಯುತ್ತ ಹರಿಯುವಳು. ನವ ವೃಂದಾವನ ಸ್ಥಳ ತುಂಗಾ ನದಿಯ ಒಂದು ದ್ವೀಪ. ಆನೆಗುಂದಿಯಲ್ಲಿ ಜನ ಸಂಖ್ಯೆ ಕಮ್ಮಿ ಇದ್ದರು ವಿವಿಧ ಊರುಗಳಿಂದ ಬರುವ ಭಕ್ತಾದಿಗಳ ಸಂಖ್ಯೆಗೇನು ಕಮ್ಮಿಯಿಲ್ಲ. ಪ್ರಶಾಂತತೆಯ ನೀರವತ್ತ ಪ್ರದೇಶದಲ್ಲಿ ಯತಿಗಳು ಬೃಂದಾವನದಲ್ಲಿದ್ದು ಭಕ್ತರನ್ನು ಇಂದಿಗೂ ಅನುಗ್ರಹಿಸುತ್ತಿದ್ದಾರೆ.

**ಶ್ರೀ ವ್ಯಾಸರಾಜರ ಹಿನ್ನೆಲೆ ಹಾಗು ಕೊಡುಗೆ**: ಶ್ರೀ ವ್ಯಾಸರಾಜರು ಮಂತ್ರಾಲಯದ ಶ್ರೀ ರಾಘವೇಂದ್ರ ಸ್ವಾಮಿಗಳ ಹಿಂದಿನ ಅವತಾರ. ಇವರ ಜನ್ಮಸ್ಥಳ ಬನ್ನೂರು, ಶ್ರೀ ಬ್ರಹ್ಮಣ್ಯ ತೀರ್ಥರಿಂದ ಸನ್ಯಾಸ ದೀಕ್ಷವನ್ನು ಪಡೆದು, ಅಂದಿನ ವಿದ್ಯಾ ಕೇಂದ್ರ ವಾದ ಮುಳುಬಾಗಿಲ ಶ್ರೀ ಶ್ರೀಪಾದರಾಜರಿಂದ ವಿದ್ಯೆ ಕಲಿತವರು. ಇವರೊಮ್ಮೆ ಪೂಜೆ ಮಾಡುವಾಗ ಸಾಕ್ಷಾತ್ ಶ್ರೀ ಕೃಷ್ಣ ನೇ ನರ್ತನ ಮಾಡುವದನ್ನು ಶ್ರೀಪಾದರಾಜರೇ ಕಣ್ಣಾರೆ ಕಂಡು ಅದನ್ನು ಅವರ ಹಾಡಿನಲ್ಲಿ ಉಲ್ಲೇಖಿಸಿದ್ದಾರೆ. "ಕೃಷ್ಣಾ ನೀ ಬೇಗನೆ ಬಾರೋ". ಎಂದು ಕೃಷ್ಣನನ್ನು ಸಾಕ್ಷಾತ್ಕರಿಸಿಕೊಂಡ ಶ್ರೀ ವ್ಯಾಸರಾಜರು, ಮಧ್ವ ಪರಂಪರೆ ಯಲ್ಲಿ



"ಗಜಕೇಸರಿ" ಎನಿಸಿಕೊಂಡ ಮಹಾ ಮುನಿಗಳು. ನಂತರದಲ್ಲಿ ತಿರುಪತಿಯ ತಿಮ್ಮಪ್ಪನ ಪೂಜೆಯನ್ನು ಹನ್ನೆರೆಡು ವರ್ಷಗಳ ಕಾಲ ಮಾಡಿದವರು. ಇಂದಿನಂತೆಯೇ ಆ ಕಾಲದಲ್ಲಿಯೂ ತಿರುಪತಿಯ ದರ್ಶನ ಕಷ್ಟ ಸಾಧ್ಯಾವಾದಂತಹುದು. ಅದಕ್ಕೆ ಅಲ್ಲಿನ ಗೋಪುರುದಲ್ಲಿ ಸಾಕ್ಷಾತ್ ವಿಮಾನ ವೇಂಕಟೇಶ್ವರನ ಪ್ರತಿಷ್ಠಾಪನೆ ಮಾಡಿದವರು. ಇಂದಿಗೂ ಅದನ್ನು ಬೆಳ್ಳಿಯ ಕಟ್ಟಿನಿಂದ ಇರುವುದನ್ನು ನೋಡ ಬಹುದು.

ಕರ್ನಾಟಕ ಸಂಗೀತ ಪಿತಾಮಹ ಎನಿಸಿಕೊಂಡ ಶ್ರೀ ಪುರಂದರ ದಾಸರಿಗೆ, ಶ್ರೀ ಕನಕದಾಸರಿಗೆ ಇನ್ನು ಹಲವಾರು ಶಿಷ್ಯರಿಗೆ

ದಾಸತ್ವವನ್ನು ಕೊಟ್ಟ ಕೀರ್ತಿ ಶ್ರೀವ್ಯಾಸರಾಜರದು. ಶ್ರೀವಾದಿರಾಜರು, ಶ್ರೀ ವಿಜೇಯೇಂದ್ರ ತೀರ್ಥರ ಗುರುಗಳಾಗಿ, ಶ್ರೀಕೃಷ್ಣ ದೇವರಾಯರಿಗೆ ಬಂದಂತಹ ಕುಹ ಯೋಗವನ್ನು (ಸರ್ಪದಿಂದ ಸಾವು) ತಾವು ಸಿಂಹಾಸನದ ಮೇಲೆ ಕುಳಿತು ಅವರಿಗೆ ಶಾಪ ಪರಿಹರಿಸಿದರು. ಅವರ ತಾತ್ಪರ್ಯ ಚಂದ್ರಿಕಾ,



ನ್ಯಾಯಾಮೃತ ಗ್ರಂಥಗಳು ಇಂದಿಗೂ ವೇದಾಂತ ವಾಗ್ಮೆಯಗಳ, ತತ್ವಕಾರರ ಪ್ರಮುಖ ಗ್ರಂಥಗಳು ಇವರ ಸಂಗೀತ ಕೃತಿಗಳು ಮತ್ತು ಇವರ ಧರ್ಮಕಾರ್ಯಗಳ ಜೊತೆಗೆ ಇವರು ಹಿಂದೂ ಸಾಮ್ರಾಜ್ಯದ ಉಳಿವಿಗಾಗಿ 732 ಆಂಜನೇಯ ವಿಗ್ರಹಗಳನ್ನು ಹಲವಾರು ಸ್ಥಳಗಳಲ್ಲಿ ಸ್ಥಾಪಿಸಿದ್ದರು, ಬೆಂಗಳೂರಿನ ಶ್ರೀ ಗಾಳಿ ಆಂಜನೇಯ ಸ್ವಾಮಿ, ಚಕ್ರತೀರ್ಥದ ಶ್ರೀ ಯಂತ್ರೋದ್ಧಾರಕ ಪ್ರಾಣ ದೇವರು (ಹನುಮ) ಇದರಲ್ಲಿ ಕೆಲವು ಪ್ರಸಿದ್ಧ ಕ್ಷೇತ್ರಗಳು. ಈ ಎಲ್ಲ ಆಂಜನೇಯ ವಿಗ್ರಹಗಳಿಗೂ ಬಾಲದಲ್ಲಿ ಘಂಟೆ ಇರುವದನ್ನು ನೋಡಬಹುದು

**ಘಟನೆಯ ದಿನ:** ಹಂಪೆಯಲ್ಲಿ ಇಂದಿಗೂ ಶ್ರೀಕೃಷ್ಣದೇವರಾಯನ ಸಂಪತ್ತನ್ನು ಹುಡುಕುತ್ತಿರುವ ಹಲವಾರು ಕಿಡಿಗೇಡಿಗಳ ಕಣ್ಣಿಗೆ ಶ್ರೀ ವ್ಯಾಸರಾಜರ ಬೃಂದಾವನ ಬಿದ್ದಿದ್ದು ದುರ್ದೈವದ ಸಂಗತಿ. ಬೃಂದಾವನ ಸಂಪೂರ್ಣವಾಗಿ ನೆಲೆಸಮ ಮಾಡಿ ಏನೂ ದೊರಕದೆ ಕೈಚೆಲ್ಲಿ ಹೊರಟು ಹೋದರು. ಶ್ರೀ ವ್ಯಾಸರಾಜ ಮಠಾದೀಶರಾದ ಶ್ರೀ ವಿದ್ಯಾ ಶ್ರೀಶರ ಮಾರ್ಗದರ್ಶನದಲ್ಲಿ ಬೃಂದಾವನದ ಪುನರ್ನಿರ್ಮಾಣ ಕಾರ್ಯಕ್ರಮ ಅಂದೇ ಶುರುವಾಯಿತು. ಶ್ರೀ ಪೇಜಾವರ ಮಠಾಧೀಶರಾದ ಶ್ರೀ ವಿಶ್ವೇಶ ತೀರ್ಥ ಶ್ರೀಪಾದಂಗಳವರು, ಮಂತ್ರಾಲಯದ ಮಠಾಧೀಶರಾದ ಶ್ರೀ ಸುಭುದೇಂದ್ರ ತೀರ್ಥರು, ಉತ್ತರಾಧಿ ಮಠಾಧೀಶರಾದ ಶ್ರೀ ಸತ್ಯಾತ್ಮ ತೀರ್ಥರು ಎಲ್ಲರ ಸಮ್ಮುಖದಲ್ಲಿ 36 ಘಂಟೆಗಳಲ್ಲಿ ಬೃಂದಾವನದ ಪುನರ್ ನಿರ್ಮಾಣ ಸುಮಾರು 2000 ಭಕ್ತಾದಿಗಳ ಸಹಾಯದೊಂದಿಗೆ ವೇದೋಕ್ತವಾಗಿ ಸಂಪೂರ್ಣಗೊಂಡಿತು. ಘಟನೆಯಿಂದ ನೊಂದ ಜನರಿಗೆ ಒಂದು ಆಹ್ಲಾದಕರವಾದ ಅನುಭವ ಹಾಗು ನೆಮ್ಮದಿ ತಂದಿತು.

ಈ ವಿಷಯವನ್ನು ಲೋಕಸಭೆ ಯಲ್ಲಿ ಪ್ರಸ್ತಾಪಿಸಿದ ರಾಜ್ಯದ ಸಂಸದ ಸದಸ್ಯರು, ಮುಂದಿನ ದಿನಗಳಲ್ಲಿ ನವ ವೃಂದಾವನಕ್ಕೆ ಹಾಗು ಹಂಪೆಯ ಇನ್ನು ಪ್ರಸಿದ್ಧ ಸ್ಮಾರಕಗಳಿಗೆ ಸೆಕ್ಯೂರಿಟಿ ಕೊಡಿಸುವ ಆಶ್ವಾಸನೆ ಕೊಟ್ಟಿದ್ದಾರೆ, ಕಿಡಿಗೇಡಿಗಳನ್ನು ಕೆಲವೇ ದಿನಗಳಲ್ಲಿ ಹಿಡಿಯುವಲ್ಲಿ ಪೊಲೀಸರು ಯಶಸ್ವಿಯಾದರು. ರಾಜ್ಯ ಸರ್ಕಾರ ಮುಂದಿನ ದಿನಗಳಲ್ಲಿ ಈ ರೀತಿಯ ಘಟನೆಗಳು ನಡೆಯದಂತೆ ಮುಂಜಾಗ್ರತಾ ಕ್ರಮಗಳು ತೆಗೆದುಕೊಂಡರೆ ಐತಿಹಾಸಿಕ ಕೊಡುಗೆ ಕೊಟ್ಟಿರುವ ಮಹನೀಯರಿಗೆ ನಾವು ಸಲ್ಲಿಸುವ ಗೌರವ.







# ಮಾವಿನ ಹಣ್ಣಿನ ಮೋಡಿ - ಮಸ್ತ್ ಮಜಾ ಮಾಡಿ



ರಚನಾ ಆಚಾರ್ಯ

## ಮಾವಿನ ಹಣ್ಣಿನ ಕುಲ್ಫಿ

**ವಿಧಾನ -೧**

ಬೇಕಾದ ಸಾಮಗ್ರಿಗಳು

1. ಮಾವಿನಹಣ್ಣಿನ ರಸ (ಪಲ್ಪ್)
2. ದಪ್ಪ ಕ್ರೀಮ್
3. ನಿಮ್ಮ ರುಚಿಗೆ ಬೇಕಾದಷ್ಟು ಸಕ್ಕರೆ.

ಮಾಡುವ ವಿಧಾನ:

ಇವೆಲ್ಲವನ್ನು ಒಟ್ಟಿಗೆ ಹಾಕಿ, ಬೆರೆಸಿ, ಫ್ರೀಜ್ ಮಾಡಿ. ಮಾವಿನಹಣ್ಣಿನ ಕುಲ್ಫಿಯನ್ನು ತಿಂದು ಮಸ್ತ್ ಮಜಾ ಮಾಡಿ.

**ವಿಧಾನ -೨**

ಬೇಕಾದ ಸಾಮಗ್ರಿಗಳು

1. 1 ಡಬ್ಬ ಕೇಸರ್ ಮಾವಿನಹಣ್ಣಿನ ರಸ (ನಾನು 30 ಔನ್ಸ್ ನಿರವ್ ಕೇಸರ್ ಮಾವಿನಹಣ್ಣಿನ ಪಲ್ಪ್ ಉಪಯೋಗಿಸಿದೆ)
2. 1 ಡಬ್ಬ ಕಂಡೆನ್ಸ್ಡ್ ಹಾಲು (14 ಔನ್ಸ್ )
3. 1 ಡಬ್ಬ ಇವಾಪೋರೇಟೆಡ್ ಹಾಲು (12 ಔನ್ಸ್)
4. 6 ಔನ್ಸ್ ದಪ್ಪ ಕ್ರೀಮ್
5. ಕುಲ್ಫಿ ಲೋಟಗಳು ಅಥವಾ ಗಾಜಿನ ಪಾತ್ರೆ.

## ಮಾವಿನಹಣ್ಣಿನ ಜೆಲ್ಲೋ

ಬೇಕಾದ ಸಾಮಗ್ರಿಗಳು

1. 2 ಕಪ್ (400ಮಿಲಿಲೀಟರ್) ನೀರು.
2. 80 ಗ್ರಾಮ್ ಮಾವಿನಹಣ್ಣಿನ ಜೆಲ್ಲೋ ಪ್ಯಾಕೆಟ್.
3. ಕುದಿಸಲು ಪಾತ್ರೆ
4. ಬೆರೆಸಲು ಚಮಚ
5. ಫ್ರಿಜ್ಜಲ್ಲಿಡುವ ಪಾತ್ರೆ.

ಮಾಡುವ ವಿಧಾನ:

ನೀರನ್ನು ಒಲೆಯ ಮೇಲೆ ಬಿಸಿ ಮಾಡಿ. ನೀರು ಕುದಿಯುವಾಗ, ಜೆಲ್ಲೋ ಪುಡಿಯನ್ನು ಬೆರೆಸಿ, ಕರಗಿಸಿ. ಇದು ಸ್ವಲ್ಪ ತಣ್ಣಗಾದ ನಂತರ, ಅದನ್ನು ಇನ್ನೊಂದು ಗಾಜಿನ ಪಾತ್ರೆಯಲ್ಲಿ ಅಥವಾ ನಿಮಗೆ ಇಷ್ಟವಾದ ಆಕಾರದ ಪಾತ್ರೆಯಲ್ಲಿ ಹಾಕಿ, ಫ್ರಿಜ್ಜಿನಲ್ಲಿ ಇಟ್ಟು, ತಣಿಸಿರಿ. ಸುಮಾರು ಎರಡು ಗಂಟೆಯ ನಂತರ ಹೊರಗೆ ತೆಗೆದು, ಹಂಚಿಕೊಂಡು ತಿಂದು, ಮಸ್ತ್ ಮಜಾ ಮಾಡಿ.

# ಬೇಸಿಗೆ ರಜಾ- ಒಂದು ಸವಿನೆನಪು



ಶ್ರೀವಿದ್ಯಾ ಪ್ರಶಾಂತ್



ನಿಶೆಯು ಕಳೆದು ಉಷೆಯು ಬರಲು
ಬಿಸಿಲ ಝಳಕೆ ಇಳೆಯು ನಗಲು
ಮನದಿ ಮೂಡಿದೆ ನವೋಲ್ಲಾಸ
ಬಾಳಲಿ ತುಂಬಿದೆ ಸುಖ-ಸಂತೋಷ...

ಬೇಸಿಗೆ ಬಂತೆಂದರೆ ಸಾಕು ಮನವು ಈ ಮಾನವ ಜೀವನದ ಸುವರ್ಣ ಘಳಿಗೆ ಎಂಬ ಬಾಲ್ಯದ ಕಡೆ ವಾಲುತ್ತದೆ. ಮತ್ತೆ ಆ ದಿನಗಳು ಬರಬಾರದೇ ಎಂಬ ಹುಸಿ ಆಸೆ ಮರುಕಳಿಸುತ್ತದೆ. ಮನುಷ್ಯನ ಸಹಜ ಗುಣವೇ ಅದು, ಇರುವುದನ್ನ ಬಿಟ್ಟು ಇಲ್ಲದುದನ್ನ ಅಥವಾ ಕಳೆದು ಹೋದದನ್ನು ಮತ್ತೆ ಪಡೆಯಬೇಕೆಂಬುದನ್ನು ಸದಾ ಹಂಬಲಿಸುತ್ತಿರುತ್ತದೆ.

ಮಾರ್ಚ್ ತಿಂಗಳ ವಾರ್ಷಿಕ ಪರೀಕ್ಷೆ ಮುಗಿಸಿ ವರುಷವಿಡೀ ಪಟ್ಟ ಪರಿಶ್ರಮದ ಫಲಿತಾಂಶವನ್ನು ತಿಳಿಯಲು ಆತುರದಿಂದ ಕಾಯುವಂತಹ ಆ ದಿನ ಇಂದಿಗೂ ಅವಿಸ್ಮರಣೀಯ.ಉತ್ತಮ ಫಲಿತಾಂಶ ಬಂದೊಡನೆ ಮನಸ್ಸಿನಲ್ಲಿ ಮೂಡುವ ಆತ್ಮವಿಸ್ವಾಸ-ಸಂತೋಷ ಹಾಗೂ ಅದನ್ನು ಹಿರಿಯರೊಡನೆ-ಗೆಳೆಯರೊಡನೆ ಹಂಚಿಕೊಂಡಾಗ ಅನಿಸುವ ಹೆಮ್ಮೆಯ ಮನೋಭಾವ ಇಂದು ಕೇವಲ ಒಂದು ಸವಿನೆನಪು ಮಾತ್ರ.ಬಾಲ್ಯದಲ್ಲಿ ಕಲಿತ ಜೀವನದ ಮೌಲ್ಯಗಳು, ಸಾಧನೆಗೆ ದೊರೆತ ಮಾನ್ಯತೆಗಳು ಮತ್ತು ಅವಕಾಶಗಳನ್ನು ಮೆಲುಕು ಹಾಕಲು ಇಂದು ಮನವು ರೋಮಾಂಚನಗೊಳ್ಳುತ್ತದೆ.

ನಮ್ಮ ಕರಾವಳಿ, ಬಿಸಿಲ ಝಳಿಗೆ ಇಳೆಯು ತನ್ನ ಮೆರುಗನ್ನು ಸೂಸುವಂತೆ ಎಲ್ಲೆಡೆ ಹಸಿರ ಹೊನಲು ತುಂಬಿ ವಿವಿಧ ಫಲ-ಪುಷ್ಪಗಳಿಂದ ಕಂಗೊಳಿಸುವ ಸುಂದರ ತಾಣ. ಮಾವು, ಹಲಸು, ತೆಂಗು, ಬಾಳೆ ಹಲವು ಬಗೆ... ಈ ಫಲಗಳಿಂದ ತಯಾರಾಗುವ ವಿಶಿಷ್ಟ ಖಾದ್ಯಗಳು ಋತುಮಾನವನ್ನು ಮತ್ತಷ್ಟು ರುಚಿಕರವಾಗಿ ಆಸ್ವಾದಿಸಲು ಪೂರಕವಾಗಿರುತ್ತದೆ. ಅಷ್ಟೇ ಅಲ್ಲದೆ ಬೇಸಿಗೆಯಲ್ಲಿ ಅರಳುವ ಹೂವುಗಳಾದ ಮಲ್ಲಿಗೆ, ಜಾಜಿ, ಸಂಪಿಗೆ, ಕೇದಗೆ ಇತ್ಯಾದಿ ನೋಡಲು ಎರಡು ಕಣ್ಣುಗಳೇ ಸಾಲದೆಂಬಂತೆ ಸುಂದರವಾಗಿ ಕಂಗೊಳಿಸುತ್ತಿರುತ್ತವೆ.

ನಮ್ಮದು ಪಟ್ಟಣದಲ್ಲಿ ನೆಲೆಸಿರುವಂತಹ ವಿಭಕ್ತ ಕುಟುಂಬ ಹಾಗಾಗಿ ಬೇಸಿಗೆ ರಜೆ ಬಂತೆದರೆ ಸಾಕು ಹಳ್ಳಿಯ ಅಜ್ಜ-ಅಜ್ಜಿ ಮನೆಗೆ ಹೋಗಲು ಮನಸ್ಸು ಹಾತೊರೆಯುತ್ತಿರುತ್ತದೆ. ಅಲ್ಲಿ ನನ್ನ ದೊಡ್ಡಪ್ಪ-ಚಿಕ್ಕಪ್ಪಂದಿರ ಮಕ್ಕಳೊಂದಿಗೆ ಜೊತೆಗೂಡಿ ಆಟವಾಡಿ ನಲಿದಾಡಿ ದಿನಗಳು ಹೇಗೆ ಕಳೆದು ಹೋಗುವುದೋ ಅರಿವಾಗದು. ಹಿಂದೆ ಅವಿಭಕ್ತ ಕುಟುಂಬಗಳ ಮನೆತನದ ಮನೆಗಳೆಂದರೆ ವಿಶಾಲವಾದ ಅಂಗಳ-ಜಗಲಿ, ದೊಡ್ಡ ಬಾವಿ, ತೋಟ, ಹೊಲ-ಗದ್ದೆ, ಈಗಿನ ಪರಿಸ್ಥಿತಿಗೆ ಹೋಲಿಸಿದರೆ ಆಗಿನದು ಸ್ವರ್ಗವೇ ಧರೆಗಿಳಿದು ಪ್ರಕೃತಿಯ ಮಡಿಲಲ್ಲಿ

ನೆಲೆನಿಂತಂತೆ ಭಾಸವಾಗುತ್ತಿತ್ತು. ಸಹೋದರ-ಸಹೋದರಿಯರ ಒಡನಾಟ ನಮ್ಮ ಬಾಂಧವ್ಯವನ್ನು ಮತ್ತಷ್ಟು ದೃಢವಾಗಿಸುತ್ತಿತ್ತು.ಸ್ವತಂತ್ರ ಪಕ್ಷಿಗಳಂತೆ ಸ್ವಚ್ಛಂದವಾಗಿ ಓಡಾಡುತ್ತಾ-ಆಟವಾಡುತ್ತಾ ಸಮಯದ ಪರಿವೇ ಇಲ್ಲದಂತೆ ಕಳೆದ ಬೇಸಿಗೆ ರಜಾ ದಿನಗಳು ಮರಳಿ ಬರಲಾರವು. ಇಂದಿನ ಆಧುನಿಕ ಜೀವನ ಪದ್ಧತಿಯಂತೆ, ಹಿಂದೆ ಯಾವುದೇ ವಸ್ತು ಮನೆಗೆ ತಂದರೂ ಅದರ ಬಗ್ಗೆ



ಹೆಚ್ಚು ಯೋಚಿಸಿ ಬಳಸಬೇಕಾಗಿರುತ್ತಿರಲಿಲ್ಲ.. ನಾವು ಆಟವಾಡಲು ಹೊರಗೆ ಹೋದರೆ ತಂದೆ-ತಾಯಿ ನಮ್ಮ ಬಗ್ಗೆ ಚಿಂತಿಸಬೇಕಾಗುತ್ತಿರಲಿಲ್ಲ..ಆದರೆ ಇಂದು ಆ ಸ್ವತಂತ್ರ ಜೀವನ ಈಗಿನ ಮಕ್ಕಳಿಗೆ ಇಲ್ಲದಂತಾಗಿದೆ ಎನ್ನುವುದೇ ವಿಷಾದ. ಬೇಸಿಗೆ ಬಂತೆಂದರೆ ಸಾಕು ಅಜ್ಜಿ ಹಪ್ಪಳ-ಸಂಡಿಗೆ ಹೊಯ್ಯಲು ನಮ್ಮೆಲ್ಲರನ್ನೂ ಕರೆದು ಕೂರಿಸಿ ಕೆಲಸವನ್ನು ಹೇಗೆ ಒಗ್ಗಟ್ಟಾಗಿ ಹೊಂದಿಕೊಂಡು ಮಾಡಬೇಕೆನ್ನುವ ಪಾಠವನ್ನು ಕಲಿಸಿಕೊಡುತ್ತಿದ್ದರು, ಅಷ್ಟೇ ಅಲ್ಲದೆ ಸಭೆ -ಸಮಾರಂಭಗಳನ್ನು ಮನೆಯಲ್ಲಿ ಆಯೋಜಿಸಿದಾಗ ಯಾವ ಪರಿಯಲ್ಲಿ ಸಿದ್ಧತೆ , ಏಕತ್ವ ಹಾಗೂ ಸಹಯೋಗದೊಂದಿಗೆ ನಡೆದುಕೊಂಡು ಕಾರ್ಯವನ್ನು ಯಾವ ಪರಿಯ ಮುತುವರ್ಜಿ ವಹಿಸಿ,

ಏನೇ ಲೋಪ-ದೋಷಗಳಿದ್ದರೂ ಅದನ್ನು ಒಂದಾಗಿ ಬಗೆಹರಿಸಿ ಕಾರ್ಯ ಪೂರೈಸಿಕೊಳ್ಳುವ ತಂತ್ರವನ್ನು ಬಾಲ್ಯದಿಂದಲೇ ಕಲಿಯುವಂತೆ ಪ್ರೋತ್ಸಾಹಿಸುತ್ತಿದ್ದರು. ಎಲ್ಲೇ ಇದ್ದರೂ-ಹೇಗೇ ಬಾಳಿದರೂ ಸಂಬಂಧಗಳಿಗೆ ಧಕ್ಕೆ ಬಾರದಂತೆ ಪ್ರೀತಿ ಮಮಕಾರವನ್ನು ಇತ್ತು ಬೆಳೆಸಿದ ರೀತಿ ಇಂದಿಗೂ ನಮ್ಮೆಲ್ಲರನ್ನು ಸಂಸಾರದ ಭದ್ರ ಬುನಾದಿಯಲ್ಲಿ ನೆಲೆನಿಲ್ಲುವಂತೆ ಮಾಡಿದೆ. ಶಾಲೆಯ ಆಟ-ಪಾಠಗಳಲ್ಲದೆ ಕುಟುಂಬದ ಒಡನಾಡಿಗಳೊಂದಿಗೆ ಬೆರೆತು ಕಲಿಯುವ ವಿಷಯಗಳು ಅದೆಷ್ಟೋ, ಆದರೆ ಇಂದಿನ ವಿದೇಶಿ ಜೀವನ ಶೈಲಿ ಮನುಷ್ಯನನ್ನು ಬಾಂಧವ್ಯಕ್ಕೆ ಬೆಲೆ ಕೊಡದೆ ಯಾಂತ್ರಿಕ ಜೀವನದೆಡೆ ಹೆಚ್ಚು ಗಮನ ಹರಿಸುವಂತೆ ಮಾಡಿದೆ. ಇಂದಿನ ಯುವ ಜನಾಂಗದಲ್ಲಿ ಹೊಸ ತಂತ್ರಜ್ಞಾನದ ಅರಿವು ಹೆಚ್ಚಾದಂತೆ ನಮ್ಮ ನಿಜ ಬುನಾದಿಯನ್ನು ಮರೆತು ಬಾಳುವ ವಿಷಮ ಸ್ಥಿತಿ ಎದುರಾಗಿದೆ. ಹಿಂದೆ ನಮ್ಮ ಬಾಲ್ಯವು ಬರಿಯ ಪುಸ್ತಕದ ಬದನೆಕಾಯಿಯಾಗದೆ ಪ್ರಕೃತಿಯ ಮಡಿಲಲ್ಲಿ ಸಹಜವಾಗಿ ಬೆಳೆಯುತ್ತಾ ಜೀವನದ ಭವಿಷ್ಯದ ಬಗ್ಗೆ ಹೆಚ್ಚು ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಆದರೆ ಇಂದು ಈ ಸ್ಪರ್ಧಾತ್ಮಕ ಜಗತ್ತಿನಲ್ಲಿ ಮಕ್ಕಳು ತಮ್ಮ ಬಾಲ್ಯವೇ ಮರೆತು ಮುಂದಿನ ಭವಿಷ್ಯದ ಬಗ್ಗೆ ಹೆಚ್ಚಿನ ಕಾಳಜಿ ವಹಿಸಿ ಅಮೂಲ್ಯವಾದ ವರ್ತಮಾನವನ್ನು ಕಳೆದುಕೊಳ್ಳುವಂತಹ ವಾತಾವರಣ ಸೃಷ್ಟಿಯಾಗಿದೆ.

ನಮ್ಮ ಕರಾವಳಿ ಕಲೆ-ಸಾಹಿತ್ಯ ಹಾಗೂ ಸಂಸ್ಕೃತಿಯ ನೆಲೆಬೀಡು. ಪ್ರತೀ ದಿನ ಎಲ್ಲೆಂದರಲ್ಲಿ ನಾಟಕ-ಯಕ್ಷಗಾನ-ದೈವನೇಮ-ನಾಗಮಂಡಲ ಹೀಗೆ ಹಲವು ಬಗೆಯ ಕಾರ್ಯಕ್ರಮಗಳು ಅದೆಷ್ಟೋ ಇರುಳ ಜಾಗರಣೆ ವಹಿಸಿ ನೋಡಿ ಆನಂದಿಸಿದ ಆ ಬಾಲ್ಯದ



ಸುಮಧುರ ಬೇಸಿಗೆ ರಜಾ ದಿನಗಳು ಅವಿಸ್ಮರಣೀಯ. ಆದರೆ ಇಂದಿನ ಕಂಪ್ಯೂಟರ್ ಯುಗದಲ್ಲಿ ವಿಡಿಯೋ ಗೇಮ್ಸ್, ಮೂವೀಸ್, ಲ್ಯಾಪ್ಟಾಪ್ ಮುಂದೆ ಕೂತು ಸಮಯ ಕಳೆವುದೇ ಒಂದು ಮಜಾ ಅದು ಬಿಟ್ಟರೆ ಬೇರೆ ಜಗತ್ತೇ ಇಲ್ಲವೆನ್ನುವಷ್ಟು ತನ್ಮಯವಾಗಿರುವ ಈಗಿನ ಯುವ ಜನಾಂಗಕ್ಕೆ ನಮ್ಮ ಸಂಸ್ಕೃತಿ ಮತ್ತು ಆಚಾರ-ವಿಚಾರಗಳ ಬಗ್ಗೆ ಅರಿವು ಮೂಡಿಸುವುದೇ ಹಿರಿಯರಾದ ನಮ್ಮ ಆದ್ಯ ಕಾರ್ಯ. ಇದುವೇ ನಮಗೆ ಶ್ರೀರಕ್ಷೆ.ಈ ದಿಶೆಯಲ್ಲಿ ನಮ್ಮ ಪ್ರಯತ್ನ ನಿರಂತರ ಸಾಗುತಿರಲಿ ಎಂಬುದೇ ನನ್ನ ಹಾರೈಕೆ.

# ಶಂಕರ ಕಣ್ಣಿನ ಆಸ್ಪತ್ರೆಗಾಗಿ ನ್ಯೂ ಜರ್ಸಿಯ ನಂದನ್ ಶಾಸ್ತ್ರಿ ಗಾಯನ



ಬರೆದವರು : ಸುಜಯ ರಾವ್ ಅನುವಾದ : ರಘುರಾಂ ರಾಯಸಂ

ಎರಡು ವರ್ಷಗಳ ಹಿಂದೆ, ಆಗ ೧೮ ವರ್ಷದ ನಂದನ್ ಶಾಸ್ತ್ರಿ ಶಂಕರ ಕಣ್ಣಿನ ಆಸ್ಪತ್ರೆಗಾಗಿ ಸಂಗೀತ ಕಚೇರಿ ನಡೆಸಿ ೫,೦೦೦ ಡಾಲರ್ ಸಂಗ್ರಹಿಸಿದ್ದನ್ನು ನೆನಪಿಸಿಕೊಳ್ಳಬಹುದು (ಇಂಡಿಯನ್ ಎಕ್ಸ್ ಪ್ರೆಸ್, ೫ ಜನವರಿ ೨೦೧೭, ಪುಟ ೧೮). ರಾಗಗಳ ಬಗ್ಗೆ ನಂದನ್ ಗೆ ಇದ್ದ ನಿಯಂತ್ರಣ, ಲೀಲಾಜಾಲವಾಗಿ ತಾನಗಳನ್ನು ಹಾಡಿದ ಬಗೆ, ಮತ್ತು ವಿವಿಧ ಭಾಷೆಗಳಲ್ಲಿ ಹಾಡುವ ಸಾಮರ್ಥ್ಯ - ಇವನ್ನು ನೋಡಿ ನಾನು ಮೆಚ್ಚಿದ್ದೆ. ಆಗಸ್ಟ್ ३, ೨೦೧೯ ರಂದು ನಂದನ್ ಇನ್ನೂ ಚೆನ್ನಾದ, ಪ್ರಬುದ್ಧವಾದ ಕಚೇರಿಯಲ್ಲಿ ಹಿಂದೂಸ್ತಾನಿ ಸಂಗೀತ ಮತ್ತು ಭಜನೆಗಳನ್ನು ಹಾಡಿದರು. ಸುವ್ಯವಸ್ಥಿತವಾದ ಕಚೇರಿಗೆ ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದ ಜನರು ಶಂಕರ ಕಣ್ಣಿನ ಆಸ್ಪತ್ರೆಯವರು ಮಾಡುವ ಸತ್ಕಾರ್ಯಕ್ಕಾಗಿ ಧಾರಾಳವಾಗಿ ದೇಣಿಗೆ ನೀಡಿದರು.



ಪ್ರಸಿದ್ಧ ತಬಲಾ ವಾದಕ ಶ್ರೀ ಮೇಘಶ್ಯಾಮ ಕೇಶವ (ಪಂಡಿತ್ ಅನಿಂದೋ ಚಟರ್ಜಿ ಅವರ ಶಿಷ್ಯ) ಮತ್ತು ಹಾರ್ಮೋನಿಯಂ ನೊಂದಿಗೆ ಶ್ರೀ ಶ್ರೀಕರ ಅಯಾಲಸೋಮಯಾಜುಲ (ಶ್ರೀ ಹೇಮಂತ್ ಕುಲಕರ್ಣಿ ಅವರ ಶಿಷ್ಯ) ನಂದನ್ ನ ಜೊತೆಗೆ ಭಾಗವಹಿಸಿದರು. ಝೂನ್ಸ್ ನೊಂದಿಗೆ ಕುಮಾರಿ ಇರಾ ಕುಲಕರ್ಣಿ ಸಹ ಧ್ವನಿಗೂಡಿಸಿದರು. ಶ್ರೀಮತಿ ದೀಪಾಲಿ ದೇಸಲೆ ಅವರು ಕಾರ್ಯಕ್ರಮದ ನಿರೂಪಣೆಯನ್ನುಬಹಳ ಅಚ್ಚುಕಟ್ಟಾಗಿ ನಡೆಸಿಕೊಟ್ಟರು.

ಮಧುಕೌನ್ಸ್ ರಾಗ ಮತ್ತು ತಿಲವಾಡ ತಾಳದಲ್ಲಿ ಬಡಾ ಖ್ಯಾಲ್ ಮತ್ತು ಛೋಟಾ ಖ್ಯಾಲ್ ನೊಂದಿಗೆ ನಂದನ್ ಕಚೇರಿ

ಆರಂಭಿಸಿದರು. ಈ ಮನಮೋಹಕ ರಾಗ, ನಂದನ್ ಆಲಾಪ ಶುರು ಮಾಡುತ್ತಿದ್ದಂತೆ ಜೀವ ತಳೆಯಿತು. ಸ್ವರಗಳ ಮೇಲೆ ನಂದನ್ ಗೆ ಇದ್ದ ನಿಯಂತ್ರಣ ನನ್ನನ್ನು ಬೆರಗಾಗಿಸಿತು. ಪಕ್ಕ ವಾದಕರ ಜೊತೆ ನಂದನ್ ಹೊಂದಿದ್ದ ಸಂವಹನ, ಮತ್ತು ಹಾಡುವಾಗ ತೋರಿದ ಮುದ ನೋಡಲು ಬಹಳ ಸಂತೋಷದಾಯಕವಾಗಿತ್ತು. ದ್ರುತ್ ಹಾಡುಗಾರಿಕೆಯಲ್ಲಿ ವೇಗವಾದ ತಾನ್ ಗಳಿದ್ದವು. ವೇಗವಾದ, ಉದ್ದವಾದ ತಾನ್ ಗಳನ್ನು ಕೇಳುವಾಗ ಉಸಿರು ಬಿಗಿಹಿಡಿದಿದ್ದ ಸಭಿಕರು ಕರತಾಡನದ ಮೂಲಕ ಮೆಚ್ಚುಗೆ ವ್ಯಕ್ತಪಡಿಸಿದರು. ಪಕ್ಕ ವಾದ್ಯಗಳನ್ನು ನುಡಿಸುತ್ತಿದ್ದ ಸಂಗೀತಗಾರರು ನಂದನ್ ನ ಹಾಡುಗಾರಿಕೆಗೆ ಕರಾರುವಕ್ಕಾಗಿ ಹೊಂದಿಕೊಂಡಿದ್ದರು. ಮೂರೂ ಜನರು ಇತರರ ಉಪಸ್ಥಿತಿಯಿಂದ ಆನಂದಿತರಾದದ್ದು ಕಂಡು ಬರುತ್ತಿತ್ತು. ಮಧುಕೌನ್ಸ್ ನ ನಂತರ ನಂದನ್ ಹಂಸಧ್ವನಿ ರಾಗದಲ್ಲಿ ಎರಡು ಕೃತಿಗಳನ್ನು ಹಾಡಿದರು. ಇದಾದ ಮೇಲೆ ಒಂದು ಚಿಕ್ಕ ಸಂಸ್ಕೃತ ಕೃತಿ, ಮತ್ತು ಹಿಂದಿಯಲ್ಲಿ ಒಂದು ಸುಪ್ರಸಿದ್ಧ ಬಂದಿಶ್. ಒಂದಾದ ಮೇಲೆ ಒಂದು ಬೇರೆ ಬೇರೆ ಭಾಷೆಗಳಲ್ಲಿನ ಕೃತಿಗಳನ್ನು ಕೇಳಲು ಬಹಳ ಚೆನ್ನಾಗಿತ್ತು. ಕೃತಿಗಳು ಚಿಕ್ಕದಾಗಿದ್ದರೂ ವಿವಿಧ ರಾಗಗಳು ಮತ್ತು ತಾನ್ ಗಳ ಮೂಲಕ ಸಭೆಯನ್ನು ಕಚೇರಿ ಹಿಡಿದಿಟ್ಟಿತ್ತು.

ಮಧ್ಯೆ ಅನಿರೀಕ್ಷಿತವಾದ ಬಿಡುವಿನಲ್ಲಿ ಮೇಘಶ್ಯಾಮ ಮತ್ತು ಶ್ರೀಕರ ಅವರು ಏಕವ್ಯಕ್ತಿ ಪ್ರದರ್ಶನಗಳನ್ನು ನೀಡಿದರು. ಇಬ್ಬರು ಕಲಾಕಾರರೂ ಅತ್ಯುತ್ತಮವಾಗಿ ನುಡಿಸಿದರು.

ಬಿಡುವಿನ ನಂತರ ನಂದನ್ ಕನ್ನಡ, ಮರಾಠಿ, ಹಿಂದಿ ಮೊದಲಾದ ಭಾಷೆಗಳಲ್ಲಿ ಭಜನೆಗಳನ್ನು ಹಾಡಿದರು. ಮೊದಲನೆಯದು ಮಿಶ್ರಭೂಪ್ ರಾಗದಲ್ಲಿ ಶ್ರೀ ವಿಜಯದಾಸರ ಭಜನೆ 'ಮಂತ್ರಾಲಯ ನಿವಾಸ ಉತ್ತಮ ಹಂಸ'. ನಂತರ ಮಾಲ್ ಕೌನ್ಸ್ ರಾಗದಲ್ಲಿ ಸಂತ ತುಕಾರಾಮರ ಮರಾಠಿ ಆಭಂಗ್, ಸಾವಲೆ ಸುಂದರ. ನಂದನ್ ನ ಆಲಾಪ ಮಧುರವಾಗಿತ್ತು. ತಾನ್ ಗಳು ಹದವಾಗಿ ಚುರುಕಾಗಿದ್ದವು. ನಂತರ ನಂದನ್ ಶ್ರೀ ವಾದಿರಾಜ ತೀರ್ಥ ಸ್ವಾಮಿಗಳ ಆವ ರೀತಿಯಿಂದ 'ನೀ ಎನ್ನ ಸಲಹುವೆ' ಹಾಡಿದರು. ಚುರುಕಾದ ಗತಿಯ ಈ ಭಜನೆಗೆ ತಬಲಾ ಮತ್ತು ಹಾರ್ಮೋನಿಯಮ್ ಪಕ್ಕ ವಾದ್ಯಗಳು ವಿಶಿಷ್ಟವಾದ ಆಯಾಮವನ್ನು ತಂದುಕೊಟ್ಟವು. ಈ ಭಜನೆಯ ಕೊನೆಗೆ ನಂದನ್ ನ ತಾನ್ ಗಳು ಅದ್ಭುತವಾಗಿದ್ದವು. ನಂದನ್ ನ ಮುಂದಿನ ಭಜನೆ ಪುರಂದರದಾಸರ ಅತಿ ಪ್ರಸಿದ್ಧ ರಚನೆಗಳಲ್ಲಿ ಒಂದಾದ ಭಾಗ್ಯದಾ ಲಕ್ಷ್ಮೀ ಬಾರಮ್ಮಾ. ಈ ರಚನೆಯನ್ನು ಅನೇಕ ಸಂಗೀತಗಾರರು ಹಾಡಿದ್ದರೂ, ನಂದನ್ ಈ ರಚನೆಯನ್ನು ತಮ್ಮದೇ ಆದ ಹೊಸ ಸೊಬಗನ್ನು ನೀಡಿ ಕೇಳುಗರ ಮನರಂಜಿಸಿದರು! ಅದ್ಭುತವಾದ ಈ ಹಾಡುಗಾರಿಕೆಯನ್ನು ಕೇಳಿದ ಸಭಿಕರಿಗೆ ಸಾಕ್ಷಾತ್ ಲಕ್ಷ್ಮಿಯೇ ಅಲ್ಲಿ ಪ್ರತ್ಯಕ್ಷಳಾದಂತೆ ಅನ್ನಿಸಿತು!!



ಕಚೇರಿ ಮೂರು ಗಂಟೆ ಮುಟ್ಟುತ್ತಿದ್ದಂತೆ ಒಂದು ಚಿಕ್ಕ ವಿರಾಮದಲ್ಲಿ ನಂದನ್ ನ ತಂದೆ ರಾಮಚಂದ್ರ ಶಾಸ್ತ್ರಿಯವರು ವಂದನಾರ್ಪಣೆ ಸಲ್ಲಿಸಿದರು. ನಂತರ ನಂದನ್ ಭೈರವಿ ರಾಗದಲ್ಲಿ ಕೊನೆಯ ಕೃತಿ ಹಾಡಿದರು. ಪಂಡಿತ್ ಭೀಮಸೇನ ಜೋಷಿಯವರು ಜನಪ್ರಿಯಗೊಳಿಸಿದ 'ಜೋ ಭಜೇ ಹರಿ ಕೋ ಸದಾ' ಕೃತಿಯನ್ನು ನಂದನ್ ಹಾಡಿದರು. ಕಚೇರಿಯ ನಂತರ ಗುರು ಶ್ರೀ ಹೇಮಂತ ಕುಲಕರ್ಣಿಯವರ ಕೊನೆಯ ಮಾತುಗಳು ಅರ್ಥಪೂರ್ಣವಾಗಿದ್ದವು. ವೇದಿಕೆಯ ಮೇಲೆ ನಂದನ್ ನ ಉಪಸ್ಥಿತಿ, ಪಕ್ಕ ವಾದ್ಯದವರ ಜೊತೆಗಿನ ಸಂವಹನ - ಇವುಗಳನ್ನು ಅವರು ಹೊಗಳಿದರು. ವೇಗವಾದ ತಾನ್ ಗಳನ್ನು ನಿರರ್ಗಳವಾಗಿ ಹಾಡಬಲ್ಲ ನಂದನ್ ತಮ್ಮ ಸಂಗೀತ ಶಾಲೆಯ "ತಾನ್" ಸೇನ್ ಎಂದು ಅವರು ಹೇಳಿದರು. ಅವರು ಹೇಳಿದ್ದಕ್ಕೆ ನನ್ನ ಸಂಪೂರ್ಣ ಸಹಮತವಿದೆ!



ಅಮೆರಿಕದಲ್ಲಿ ಒಳ್ಳೆಯ ಗುಣಮಟ್ಟದ ಸಂಗೀತ ಕಚೇರಿಗಳಿಗೆ ನಾವು ಭಾರತದಿಂದ ಬರುವ ಕಲಾಕಾರರತ್ತ ನೋಡುತ್ತೇವೆ. ಆದರೆ ನಂದನ್ ಮತ್ತು ಶ್ರೀಕರ ನಂತಹ ಪ್ರತಿಭಾವಂತ ಯುವಕರು ಅಮೆರಿಕದಲ್ಲಿ ನಮ್ಮ ಸಾಂಸ್ಕೃತಿಕ ಸಂಪ್ರದಾಯಗಳನ್ನು ಜೀವಂತವಾಗಿ ಇಡುವುದನ್ನು ನೋಡಲು ಹೆಮ್ಮೆಯೆನಿಸುತ್ತದೆ. ಭೂಗೋಳದಲ್ಲಿ ಎಲ್ಲಿದ್ದರೂ ಯುವ ಪ್ರತಿಭೆಯನ್ನು ಗುರುತಿಸಿ, ಪೋಷಿಸುವುದು ಅತ್ಯಗತ್ಯ. ನಂದನ್ ನಮ್ಮ ಕಣ್ಣ ಮುಂದೆಯೇ ಬೆಳೆದು ಭರವಸೆಯ ಕಲಾವಿದನಾಗಿರುವುದನ್ನು ನೋಡಲು ಹೆಮ್ಮೆಯೆನಿಸುತ್ತದೆ. ಹಿಂದುಸ್ತಾನಿ ಸಂಗೀತ ಕ್ಷೇತ್ರದ ಫಲಪ್ರದ ದಾರಿಯಲ್ಲಿ ಆತ ಈಗ ನಡೆಯುತ್ತಿದ್ದಾರೆ . ಈ ಹಾದಿಯಲ್ಲಿ ನಮ್ಮ ಪ್ರೋತ್ಸಾಹವನ್ನು ನಂದನ್ ಗೆ ನೀಡಿ ಬೆಂಬಲಿಸೋಣ. ಶಂಕರ ಕಣ್ಣಿನ ಆಸ್ಪತ್ರೆ ನಂದನ್ ಗೆ ಶುಭ ಕೋರುತ್ತಾ, ಮತ್ತು ಅವನೊಡನೆ ಮತ್ತೊಮ್ಮೆ ಅತಿ ಶೀಘ್ರದಲ್ಲೇ ಕೆಲಸ ಮಾಡಲು ಆಶಿಸುತ್ತದೆ!

**ನಂದನ್ ಶಾಸ್ತ್ರಿ**: ೨೦೧೯ ರ ಶರತ್ಕಾಲ (ಫಾಲ್ ನಲ್ಲಿ)ದಲ್ಲಿ ನೋವಾ ಸೌತ್ ಈಸ್ಟರ್ನ್ ವಿಶ್ವವಿದ್ಯಾಲಯದಲ್ಲಿ ಅಧ್ಯಯನ ಆರಂಭಿಸಲಿದ್ದಾರೆ .

**ಶ್ರೀಕರ ಅಯಾಲಸೋಮಯಾಜುಲ**: ಮಿಶಿಗನ್ ವಿಶ್ವವಿದ್ಯಾಲಯದಲ್ಲಿ ಎರಡನೆ ವರ್ಷದ ವಿದ್ಯಾರ್ಥಿ

**ಮೇಘಶ್ಯಾಮ ಕೇಶವ**: ವೈಟ್ ಪ್ಲೈನ್ಸ್, ನ್ಯೂ ಯಾರ್ಕ್ ನಲ್ಲಿ ಸಾಫ್ಟ್ವೇರ್ ಎಂಜಿನಿಯರ್

# ಚಿಣ್ಣರ ಚಿತ್ರಗಳು





ಚಿತ್ರ
ಸಾರ್ಥಕ್





ಚಿತ್ರ:
ಅನಘಾ





ಚಿತ್ರ
ಗಹನ್



# ಕಣ್ಮನ ತಣಿಸುವ ರಂಗೋಲಿಯ ಒಂದು ಪುಟ್ಟ ಮನವಿ

*ಮಮತಾ ನಾಗೇಂದ್ರ*



ಮುದ್ದಾದ ಕಣ್ಣುಗಳು ಮುಂಜಾನೆಯ ಬೆಳಕಿಗೆ ಬಿಡಲಾರದೆ ಬಿಟ್ಟು ಅಮ್ಮನ್ನನ್ನು ಮನೆಯೆಲ್ಲಾ ಹುಡುಕಿ, ಕೊನೆಗೆ ಮುದ್ದು ಕಂದಾ ಬಂದು ನಿಂತದ್ದು ಮನೆಯ ಮುಂಬಾಗಿಲಿಗೆ. ಅಲ್ಲಿ ಅಮ್ಮ ಮುಂಬಾಗಿಲನ್ನು ಸ್ವಚ್ಛಗೊಳಿಸಿ ಏನ್ನನ್ನೋ ಸುಂದರವಾಗಿ ನೆಲದ ಮೇಲೆ ಬಿಡಿಸುತ್ತಿದ್ದಾಳೆ. ಪ್ರತಿ ಗೆರೆ ಎಳೆದಾಗಲೂ ಪ್ರತಿ ಚುಕ್ಕೆ ಇಟ್ಟಾಗಲು ಒಂದೇ ಕುತೂಹಲ ಇದು ಯಾವ ಚಿತ್ರ? ಎಂದು. "ಅಮ್ಮ ಏನು ಬರೀತಿದಿಯ? ಎಂಬ ತೊದಲು ನುಡಿಯ ಪ್ರಶ್ನೆಗೆ ಅವಳ ಒಂದು ಚುಟುಕಾದ ಉತ್ತರ "ರಂಗೋಲಿ". ಹೌದು ಅದೇ ನಾನು "ರಂಗೋಲಿ" ಅಥವಾ " ರಂಗವಲ್ಲಿ'. ಬೆಳಗಿನ ಉಷೆಯನ್ನು, ಮನೆಗೆ ಬರುವ ಅತಿಥಿಗಳನ್ನು ಬರುಮಾಡಿಕೊಳ್ಳುವುದೇ ನಾನು. ಇಂದು ನಿಮ್ಮೊಂದಿಗೆ ನನ್ನ ಮನಸಿನಾಳದ ಮಾತನ್ನು ಹೇಳಿ, ಒಂದು ಪುಟ್ಟ ಮನವಿ ಯನ್ನು ಸಲ್ಲಿಸೋಣ ಎಂದು ಬಂದಿದ್ದೇನೆ.

"ರಂಗೋಲಿ" ಇದೇ ನನ್ನ ನಿರ್ದಿಷ್ಟ ಹೆಸರು ಅಂತ ಏನಿಲ್ಲ ಆ ಪ್ರದೇಶಕ್ಕೆ ಅವರವರ ಬಾಷೆಯಲ್ಲಿ ನನ್ನನು ಬೇರೆ ಬೇರೆ ಹೆಸರುಗಳಿಂದ ಕರೆಯುತ್ತಾರೆ. ಹೆಸರಲ್ಲೇನಿದೆ ಅಲ್ಲವೇ!! ಬಹುಷಃ ನನ್ನ ಚರಿತ್ರೆ ಪುರಾಣ ಶುರುವಾಗೋದು ಮಾನವನ ನಾಗರಿಕತೆಯ ವಿಕಸನದೊಂದಿಗೆ ಎಂದರೆ ತಪ್ಪಾಗಲಾರದು. ರಾಮಾಯಣ, ಮಹಾಭಾರತ ಕಾಲದಿಂದಲೂ ರಾಜ ಮಹಾರಾಜರನ್ನು ಸ್ವಾಗತಿಸಲು, ಮನೆಯನ್ನು ಅಲಂಕರಿಸಲು, ಮದುವೆ, ಮುಂಜಿ ನಾಮಕರಣದಂತಹ ಎಲ್ಲಾ ಶುಭ ಕಾರ್ಯಗಳು ಪೂಜೆ ಪುನಸ್ಕಾರಗಳು ಎಲ್ಲಾ ಕಡೆ ನಾವು ಹಾಜರ್. ಎಲ್ಲಿ ಶುಭವೋ ಅಲ್ಲಿ ನಾವು. ಕೆಲವೊಮ್ಮೆ ನಮ್ಮ ಇರುವಿಕೆ ಇಂದ ಶುಭ / ಅಶುಭ ಕಾರ್ಯವೋ ಎಂದು ನಿರ್ದರಿಸಬಹುದು. ನಾನು ನಮ್ಮ ಹೆಮ್ಮೆಯ ಸಂಸ್ಕೃತಿಯ ಪ್ರತೀಕ ಕೂಡ ಹೌದು. ನಾನಿದ್ದ ಕಡೆ ಜನರು ಒಮ್ಮೆಯೂ ನನ್ನನ್ನು ನೋಡದೆ ಕಡಗಣಿಸಿ ಹೋಗುವವರು ತುಂಬಾನೇ ಅಪರೂಪ. ವಧುಪರೀಕ್ಷೆಯಲ್ಲಿ "ಹಾಡು ಹಸೆ ಬರುತ್ತಾ?" ಎಂಬ ಪ್ರಶ್ನೆಯಲ್ಲಿ ಇರುತಿದ್ದೆ ಎಂದು ತುಸು ಗರ್ವದಿಂದ ಹೇಳಬಲ್ಲೆ. ಹೀಗೆ ನನ್ನ ಗತವೈಭವವನ್ನು ಎಷ್ಟು ವರ್ಣಿಸಲು ಸಾಲದು.

ನನ್ನನ್ನು ಸಾಮಾನ್ಯವಾಗಿ ನೆಲದಮೇಲೆ ಅಂದ ಚೆಂದವಾಗಿ ಬಿಡಿಸುತ್ತಾರೆ. ಮನೆಯ ಮುಂಬಾಗಿಲು ಎಂದರೆ ನನಗೆ ತುಂಬಾ ಅಚ್ಚುಮೆಚ್ಚು ಆದರೆ ಅದೇ ಜಾಗ ಬೇಕೆಂದಲ್ಲ!! ದೇವರಕೋಣೆಯಲ್ಲೂ, ಮನೆಯ ಅಂಗಳದಲ್ಲೂ ನಡುಮನೆಯಲ್ಲೂ, ದೇವಸ್ಥಾನದಲ್ಲಿ, ಸಭೆ ಸಮಾರಂಭಗಳಲ್ಲಿ, ರಸ್ತೆ ಗಲ್ಲಿಗಳಲ್ಲಿ ಹೀಗೆ ಎಲ್ಲಿ ಬಿಡಿಸಿದರು ನನಗೆ ಇಷ್ಟವೇ. ನನ್ನನ್ನು ಹೀಗೆಯೇ ಬಿಡಿಸಿ ಎಂಬಾ ಕಟ್ಟಪ್ಪಣೆ ಖಂಡಿತಾ ಇಲ್ಲ. ಕೆಲವರು ನನ್ನನ್ನು ರಂಗೋಲಿ ಪುಡಿಯಿಂದ, ಹೂವಿನಿಂದ, ಜೇಡಿಮಣ್ಣಿನ ಪುಡಿಯಿಂದ, ಬಣ್ಣಗಳಿಂದ, ಸುಣ್ಣದಿಂದ, ಕಾಯಿಪಲ್ಯದಿಂದ, ದೀಪಗಳಿಂದ ಹೀಗೆ ಹಲವಾರು ಬಗೆಗಳಿಂದ ಬಿಡಿಸುತ್ತಾರೆ. ಹೆಣ್ಣು ಗಂಡುಗಳೆಂಬ ಭೇದವಿಲ್ಲದೆ, ಕಲಾವಿದನ ಕೈಚಳಕ, ಕಲ್ಪನೆ, ನೈಪುಣ್ಯತೆಗಳ ಮೇಲೆ ನಾನು ಮೂಡುತ್ತೇನೆ. ನಾನು ಹೇಗೆ ಇದ್ದರು ಅಂದ ಅಲ್ಲವೇ!! ಸದಾ ಕಣ್ಮನಗಳಿಗೆ ಹಬ್ಬವೇ!! ಇಂದಿಗೂ ಸಹ ನನ್ನಿಂದಲೇ ಬೆಳಿಗ್ಗೆ ಆಗುವುದು ಎಂಬ ನಂಬಿಕೆ (ಸೋಮನಹಳ್ಳಿಯ ಅಜ್ಜಿಯ ಹುಂಜದಂತೆ) ಆದರೆ ಕೆಲವರಿಗೆ ಮಾತ್ರ. ಹೆಣ್ಣುಮಕ್ಕಳಿಗೆ ಬೆಳಿಗ್ಗೆ ಎದ್ದ ತಕ್ಷಣ ಬಾಗಿಲಿಗೆ ನೀರುಹಾಕಿ ಸ್ವಚ್ಛಗೊಳಿಸಿ, ರಂಗೋಲಿ ಹಾಕಿ ನಂತರವಷ್ಟೇ ಬೇರೆ ಕೆಲಸ. ಅವರಿಗೆ ನನ್ನನ್ನು ಬಿಡಿಸಿ ನೋಡದಿದ್ದರೆ ಬಿಸಿ ಬಿಸಿ ಕಾಫಿ ಸಹ ಒಳಗೆ ಇಳಿಯುವುದಿಲ್ಲ. ಇಂಥವರಿಗೆ ನಾನು ಸದಾ ಕೃತಜ್ಞ.

ಇಂದಿನ ಕಾಲದಲ್ಲಿ ಸದಾ ಕೆಲಸದಲ್ಲಿ ಬ್ಯುಸಿ ಆಗಿರುವವರ ಕಷ್ಟ ನಂಗೂ ಅರ್ಥ ಆಗ್ತುತ್ತೆ. ಅವರಿಗೆ ನನ್ನ ಬಗ್ಗೆ ಅಸಡ್ಡೆ ಇಲ್ಲದಿದ್ದರೂ ಸಮಯವಿಲ್ಲಾ. ಸಮಯವಿದ್ದರೂ ನನಗಿಂತ ಬೇರೆ ವಸ್ತು ಅಥವಾ ಬೇರೆ ಕೆಲಸದ ಮೇಲೆ ಒಲವು ಹೆಚ್ಚು. ನನಗೇನು ಇಂಥವರ ಬಗ್ಗೆ ಆರೋಪ ಇಲ್ಲ. ನನ್ನ ಬಗ್ಗೆ ಆಸಕ್ತಿ ಇರುವವರಿಗೋಸ್ಕರ ನಾನು ಸಹ ಬದಲಾಗಿದ್ದೇನೆ. ಈಗ ನಾನು ready to eat ತರಹ ready to paste ಸ್ಟಿಕರ್ ರಂಗೋಲಿಯಾಗಿ ಬದಲಾಗಿದ್ದೇನೆ. ಸುಲಭವಾಗಿ ಹಾಕುವ ಬಹು ದಿನ ಬಾಳಿಕೆ ಹಾಗು ಕೈಗೆಕುಟುಕ ದರದಲ್ಲಿ ಸಿಗುತ್ತೇನೆ. ಮಾರುಕಟ್ಟೆಯಲ್ಲಿ ವಿಧವಿಧವಾಗಿ ಅವರವರ ಅನುಕೂಲಕ್ಕೆ ತಕ್ಕಂತೆ ನನ್ನ ಅವತಾರವನ್ನು ಬೆಲೆಯನ್ನು ನಾನು ಮಾರ್ಪಾಟು ಮಾಡಿಕೊಂಡಿದ್ದೇನೆ.

ಹಿಂದೆ ಹೆಂಗಳೆಯರು ನನಗೋಸ್ಕರ ಪ್ರತಿವಾರ ಸುಧಾ, ತರಂಗ, ಪ್ರಜಾಮತದಂತಹ ವಾರ ಪ್ರತಿಕೆ, ಮಾಸ ಪತ್ರಿಕೆಗಳನ್ನು ಕಾಯುತಿದ್ದರು ಹಾಗು ಜೋಪಾನವಾಗಿ ನನ್ನನ್ನು ಸಂರಕ್ಷಿಸಿಡುತಿದ್ದರು ಇದಕ್ಕೆ ಪುರಾವೆ ನೀಡುವಂತೆ ಹಲವರ ಮನೆಗಳಲ್ಲಿ ಇಂದಿಗೂ ರಂಗೋಲಿ ಪುಸ್ತಕಗಳನ್ನೂ ಕಾಣಬಹುದು. ಇಷ್ಟು ಹೇಳಿದ ಮೇಲೆ ನನ್ನ ವೈಶಿಷ್ಟದ ಗತವೈಭವದ ಪರಿಚಯ ನಿಮಗೆಯಾಗಿದೆ ಎಂದು ನಂಬಿದ್ದೇನೆ. ಈಗ ನನ್ನ ವ್ಯಥೆ ಏನೆಂದರೆ ಹಲವರಂತೆ ನಾನು ಕೂಡ ಆಧುನಿಕತೆಯ ರಭಸಕ್ಕೆ ಸಿಕ್ಕಿ ನಲುಗಿದ್ದೇನೆ. ನನ್ನ ಅಸ್ಥಿತ್ವ ಅವಸನದಲ್ಲಿದೆ. ನಾನು ಮತ್ತೆ ನಿಮ್ಮ ಬದುಕಿನ ಅಂಗವಾಗಬೇಕೆಂಬ ಮಹದಾಸೆ. ಈ ಲೇಖನದ ಮೂಲಕ ನನ್ನದೊಂದು ಪುಟ್ಟವಿನಂತಿ ಏನೆಂದರೆ ಈಗ ಹಬ್ಬಗಳ ಮಾಸ ಶುರುವಾಗಿದೆ ಸಾಲು ಸಾಲು ಹಬ್ಬಗಳು ಬರುತ್ತಿದೆ. ಈ ಹಬ್ಬಗಳಿಗೆ ದಯವಿಟ್ಟು ಮರೆಯದೆ ನನ್ನನ್ನು ಬರಮಾಡಿಕೊಳ್ಳಿ ಇಲ್ಲಾ ಎನ್ನದೆ ಖಂಡಿತ ಬಂದು ನಿಮ್ಮ ಮನೆಮಂದಿಗೆಲ್ಲ ಕಣ್ಮನಗಳಿಗೆ ಹಬ್ಬವನ್ನುಂಟು ಮಾಡುತ್ತೇನೆ. ನಿಮ್ಮ ಮಕ್ಕಳಿಗೂ ಮುಂದಿನ ಪೀಳಿಗೆಗೂ ನನ್ನನ್ನು ದಯವಿಟ್ಟು ಪರಿಚಯಿಸಿ. ಈ ಮೇಲೆ ಉಲ್ಲೇಖಿಸಿದಂತೆ ನಿಮಗೆ ಸ್ವತಃ ಆಗದಿದ್ದರೂ ಮಾರುಕಟ್ಟೆಯಲ್ಲಿ ನನ್ನ ಹೊಸ ಮಾದರಿಯನ್ನುಕೊಳ್ಳಿರಿ ಹಾಗೆಯೇ ಮುಂದಿನ ಸಲ ಭಾರತಕ್ಕೆ ಹೋದಾಗ ನಿಮ್ಮ ಬಂಧುಮಿತ್ರರಿಗೆ ಕೊಡುಗೆ ನೀಡಲು ನನ್ನನ್ನು ಖರೀದಿಸಿ. ನನ್ನನ್ನು ನಂಬಿ ಕಾಯಕ ಮಾಡುತ್ತಿರುವ ಹಲವಾರು ಕುಟುಂಬಗಳಿಗೆ ಸಹಾಯವಾಗುತ್ತದೆ. ಸಾದ್ಯವಾದರೆ ಸಭೆ ಸಮಾರಂಭಗಳಲ್ಲಿ ರಂಗೋಲಿ ಸ್ಪರ್ಧೆಯನ್ನು ಏರ್ಪಡಿಸಿ ನನ್ನ ಉಳಿವಿಗೆ ಕಾರಣರಾಗಿ. ಇದು ನನ್ನ ಕಳಕಳಿಯ ಮನವಿ. ಖಂಡಿತ ರಂಗು ರಂಗಾದ ಈ ರಂಗವಲ್ಲಿಯನ್ನು ಮರೆಯುವುದಿಲ್ಲ ತಾನೇ! ಸದಾ ನಿಮಗೋಸ್ಕರ ಕಾಯುತಿರುತ್ತೇನೆ.

